# ಶ್ರೀ ಗೋಕರ್ಣನಾಥ ಕೋ-ಓಪರೇಟಿವ್ ಬ್ಯಾಂಕ್ ಲಿ.

ಆಡಳಿತ ಕಛೇರಿ: ಶ್ರೀ ಗೋಕರ್ಣನಾಥ ದೇವಸ್ಥಾನ ರಸ್ತೆ, ಕುದ್ರೋಳಿ, ಮಂಗಳೂರು – 575003
ದೂರವಾಣಿ: 0824–2494662, 2494691
www.gokarnanath.bank.in | admin@gokarnanath.bank.in



# ವಾರ್ಷಿಕ ವರದಿ 2025-2026

## 102ನೇ ಸಾಮಾನ್ಯ ಸಭೆ

ದಿನಾಂಕ: **06.09.2026 ರವಿವಾರ** | ಸಮಯ: **ಬೆಳಿಗ್ಗೆ ಗಂಟೆ 10:30ಕ್ಕೆ**
ಸ್ಥಳ: **'ಜಯ ಸಿ. ಸುವರ್ಣ ಕಲ್ಯಾಣ ಮಂಟಪ', ಶ್ರೀ ಗೋಕರ್ಣನಾಥ ದೇವಸ್ಥಾನ, ಕುದ್ರೋಳಿ, ಮಂಗಳೂರು-03**

# BOARD OF DIRECTORS



Mr. Chandrashekar Kumar
President



Mr. Jayaram Poojary
Vice President



Mr. Jayaram Karandoor
Director B.O.M President



Mr. Yogish Kotian
Director



Mr. Harish Poojary K
Director



Mr. Kuppa Poojary
Director



Mr. Rajesh Kumar G Suvarna-Director
B.O.M.-Director



Mrs. Gayathri Ganesh
Director



Mrs. Chandravathi
Director



Mr. Nagaraj
Director



Mr. Jagadish N
Director



Mr. Anil Kumar
Director



Mr. Prakash
Director



Mr. K Ramesh Bangera
Director



Mr. Keshava B
Director



Mr. Shankar Naik
Director



Mrs. Ashalatha
Director



Mr. Varadaraj A
Professional Director



Mr. Shravan Kumar
Professional Director



Mr. Rajaram B Anchan
B.O.M. Director



Mr. Jayananda M
B.O.M. Director



Mr. Deepak Kotian
B.O.M. Director



Mr. Chandrashekar P.
General Manager I/C

# ಶ್ರೀ ಗೋಕರ್ಣನಾಥ ಕೋ-ಓಪರೇಟಿವ್ ಬ್ಯಾಂಕ್ ಲಿ., ಮಂಗಳೂರು-575003

## ವಾರ್ಷಿಕ ಸಾಮಾನ್ಯ ಸಭೆಯ ನೋಟೀಸು

ಬ್ಯಾಂಕಿನ 102 ನೆಯ **2025-26ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 06-09-2026 ರಂದು ರವಿವಾರ ಪೂರ್ವಾಹ್ನ ಘಂಟೆ 10.30 ಕ್ಕೆ ಸರಿಯಾಗಿ ಜಯ ಸಿ ಸುವರ್ಣ ಕಲ್ಯಾಣ ಮಂಟಪ, ಶ್ರೀ ಗೋಕರ್ಣನಾಥ ದೇವಸ್ಥಾನ, ಕುದ್ರೋಳಿ, ಮಂಗಳೂರು-3** ಇಲ್ಲಿ ಈ ಕೆಳಗೆ ಕಾಣಿಸಿದ ವಿಷಯಗಳನ್ನು ಚರ್ಚಿಸಲು ಜರಗಲಿರುವುದು. ಆದುದರಿಂದ ಎಲ್ಲಾ ಸದಸ್ಯರು ಸಕಾಲದಲ್ಲಿ ಆಗಮಿಸಿ ಸಭೆಯಲ್ಲಿ ಭಾಗವಹಿಸಲು ಕೋರಲಾಗಿದೆ.

## ಕಾರ್ಯಕ್ರಮ

1. ಪ್ರಾರ್ಥನೆ.
2. ಅಧ್ಯಕ್ಷರಿಂದ ಪ್ರಾಸ್ತಾವಿಕ ಭಾಷಣ.
3. 2025-26ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯ ನೋಟೀಸನ್ನು ಓದಿ ದಾಖಲು ಮಾಡುವುದು.
4. ದಿನಾಂಕ 14-09-2025 ರಂದು ಜರಗಿದ ವಾರ್ಷಿಕ ಸಾಮಾನ್ಯ ಸಭೆಯ ನಡವಳಿಕೆಗಳನ್ನು ಓದಿ ದೃಢೀಕರಿಸುವ ಕುರಿತು. (ಪುಟ ಸಂಖ್ಯೆ 3 ರಿಂದ 7 ರವರೆಗೆ)
5. ಬ್ಯಾಂಕಿನ 2025-26ನೇ ವರ್ಷದ ಬಾಬ್ತು ನಿರ್ದೇಶಕ ಮಂಡಲಿ ಸಾದರಪಡಿಸಿದ ವಾರ್ಷಿಕ ವರದಿಯನ್ನು ಅನುಮೋದಿಸಿ ದಾಖಲಿಸುವ ಕುರಿತು. (ಪುಟ ಸಂಖ್ಯೆ 8 ರಿಂದ 11 ರವರೆಗೆ)
6. 2025-26ನೇ ವರ್ಷದ ಆಯವ್ಯಯ ಅಂದಾಜು ಬಜೆಟ್‌ಗಿಂತ ಹೆಚ್ಚಿಗೆ ಆದ ಖರ್ಚನ್ನು ಅನುಮೋದನೆ ಮಾಡುವ ಕುರಿತು. (ಪುಟ ಸಂಖ್ಯೆ 14 ರಿಂದ 15 ರವರೆಗೆ)
7. 2025-26ನೇ ಸಾಲಿನಲ್ಲಿ ಧರ್ಮದ ನಿಧಿ ಖಾತೆಯಿಂದ ಪಾವತಿಸಿದ ರೂ. 1,00,000/- ದೇಣಿಗೆಯ ಸ್ಥಿರೀಕರಣ.
8. 2025-26ನೇ ಸಾಲಿನ ಆಡಿಟ್ ರಿಪೋರ್ಟ್ ಲೆಕ್ಕ ಪರಿಶೋಧಕರಿಂದ ದೃಢೀಕರಿಸಲ್ಪಟ್ಟ ಆರ್ಥಿಕ ತಃಖ್ತೆಗಳ ಸ್ಥಿರೀಕರಣ, ಲೆಕ್ಕ ಪರಿಶೋಧಕರ ಅಭಿಪ್ರಾಯ, ಸೂಚನೆ ಮತ್ತು ನ್ಯೂನತೆಗಳಿಗೆ ನಿರ್ದೇಶಕ ಮಂಡಲಿ ನೀಡಿದ ಸಮಜಾಯಿಷಿ ವರದಿಯನ್ನು ಓದಿ ಸ್ಥಿರೀಕರಿಸುವುದು. (ಪುಟ ಸಂಖ್ಯೆ 16 ರಿಂದ 22 ರವರೆಗೆ)
9. 2025-26ನೇ ಸಾಲಿನ ನಿವ್ವಳ ಲಾಭ ರೂ 2,04,65,944.54 ನ್ನು ನಿರ್ದೇಶಕ ಮಂಡಲಿಯ ಶಿಫಾರಸು ಮೇರೆಗೆ ವಿಂಗಡಣೆ ಮಾಡುವ ಕುರಿತು. (ಪುಟ ಸಂಖ್ಯೆ 23)
10. ಬ್ಯಾಂಕಿನ ಸಿಬ್ಬಂದಿಗಳಿಗೆ 2025-26 ನೇ ಸಾಲಿಗೆ ಬೋನಸ್ ಕಾಯ್ದೆ 1965 ರನ್ವಯ ಬೋನಸ್ಸಿಗೆ ಅರ್ಹರಲ್ಲದ ಸಿಬ್ಬಂದಿಗಳಿಗೆ ಎಕ್ಸ್‌ಗ್ರೇಷಿಯಾ ಪಾವತಿಸುವ ಕುರಿತು.
11. ಬ್ಯಾಂಕಿನ 2026-27ನೇ ಸಾಲಿನ ರಿಸರ್ವ್ ಬ್ಯಾಂಕ್‌ನ ನಿರ್ದೇಶನ ಪ್ರಕಾರ ರಚಿತ ನೇಮಕಾತಿ ಪಾಲಿಸಿಯಂತೆ ಶಾಸನಬದ್ಧ ಲೆಕ್ಕ ಪರಿಶೋಧಕರ ನೇಮಕಕ್ಕೆ ಅನುಮೋದನೆ ಕುರಿತು.
12. 2026-27ನೇ ವರ್ಷದ ಆಯವ್ಯಯ ಅಂದಾಜು ಪಟ್ಟಿಯನ್ನು ಮಂಜೂರು ಮಾಡುವ ಕುರಿತು.
(ಪುಟ ಸಂಖ್ಯೆ 14 ರಿಂದ 15 ರವರೆಗೆ)
13. 2026-27ನೇ ಸಾಲಿನಲ್ಲಿ ಹಮ್ಮಿಕೊಳ್ಳಲಾಗಿರುವ ಕ್ರಿಯಾ ಯೋಜನೆಯನ್ನು ಅನುಮೋದನೆ ಮಾಡುವ ಕುರಿತು. (ಪುಟ ಸಂಖ್ಯೆ 23)
14. ಬ್ಯಾಂಕಿನ ಉಪವಿಧಿಗಳಿಗೆ ತಿದ್ದುಪಡಿ ಅನುಮೋದಿಸುವ ಕುರಿತು. (ಪುಟ ಸಂಖ್ಯೆ 24 ರಿಂದ 30 ರವರೆಗೆ)
15. ಬ್ಯಾಂಕಿನ ಕಾರ್ಯಕ್ಷೇತ್ರ ವ್ಯಾಪ್ತಿಯ ಜಿಲ್ಲೆಗಳಲ್ಲಿ ಬ್ಯಾಂಕಿನ ಹೊಸ ಶಾಖೆ ತೆರೆಯುವುದು ಹಾಗೂ ಶಾಖೆಗಾಗಿ ಸೂಕ್ತ ನಿವೇಶನ/ಕಟ್ಟಡ ಖರೀದಿಸುವರೇ ಮಹಾಸಭೆಯ ಅನುಮತಿಗಾಗಿ ಪ್ರಸ್ತಾವನೆ.
16. ಅಧ್ಯಕ್ಷರ ಅನುಮತಿ ಮೇರೆಗೆ ಇತರ ವಿಷಯಗಳು.
17. ವಂದನಾರ್ಪಣೆ.
18. ರಾಷ್ಟ್ರಗೀತೆ.

(ನಿರ್ದೇಶಕ ಮಂಡಲಿಯ ಅನುಮತಿ ಮೇರೆಗೆ)

ಮಂಗಳೂರು
12.08.2026

ಸಹಿ/-
ಜನರಲ್ ಮೆನೇಜರ್ (ಪ್ರಭಾರ)

**ವಿಶೇಷ ಸೂಚನೆ :**

1. ಬ್ಯಾಂಕಿನ ಪ್ರತಿಯೊಬ್ಬ ಸದಸ್ಯನ ಕರ್ತವ್ಯ ಮತ್ತು ಹೊಣೆಗಾರಿಕೆಗಳು ಈ ಕೆಳಗಿನಂತಿವೆ:
   - i) ಸದಸ್ಯರು ಬ್ಯಾಂಕಿನಲ್ಲಿ ಕಡ್ಡಾಯವಾಗಿ ಯಾವುದೇ ಮೂಲದಲ್ಲಿ ತೊಡಗಿಸತಕ್ಕ ಕನಿಷ್ಠ ಠೇವಣಿ ರೂ.1000/–
   - ii) ಸದಸ್ಯರು ತಮ್ಮ ಚಾಲ್ತಿ ಖಾತೆ ಅಥವಾ ಉಳಿತಾಯ ಖಾತೆಯಲ್ಲಿ ವರ್ಷದಲ್ಲಿ ನಡೆಸಬೇಕಾದ ಕನಿಷ್ಠ ಬ್ಯಾಂಕಿಂಗ್ ವ್ಯವಹಾರಗಳ ಸಂಖ್ಯೆಯು 10 ಇರತಕ್ಕದ್ದು.
   - iii) ರಿಸರ್ವ್ ಬ್ಯಾಂಕ್ ನೀಡಿರುವ "ನಿಮ್ಮ ಗ್ರಾಹಕರನ್ನು ತಿಳಿಯಿರಿ" (ಕೆ.ವೈ.ಸಿ) ನಿರ್ದೇಶನವು ಬ್ಯಾಂಕಿನ ಪ್ರತಿ ಸದಸ್ಯನಿಗೆ ಅನ್ವಯವಾಗತಕ್ಕದ್ದು.
   - iv) ಬ್ಯಾಂಕಿನ ಸದಸ್ಯರು ಸಾಮಾನ್ಯವಾಗಿ ಬ್ಯಾಂಕಿನ ಪ್ರತಿಯೊಂದು ವಾರ್ಷಿಕ ಸಾಮಾನ್ಯ ಸಭೆಗೆ ಹಾಜರಾಗತಕ್ಕದ್ದು. ಆದರೆ ಕಳೆದ ಐದು ವಾರ್ಷಿಕ ಸಾಮಾನ್ಯ ಸಭೆಗಳ ಪೈಕಿ ಕನಿಷ್ಠ ಯಾವುದೇ ಎರಡು ಸಾಮಾನ್ಯ ಸಭೆಗಳಿಗೆ ಹಾಜರಾಗಲು ತಪ್ಪುವ ಸದಸ್ಯರಿಗೆ ಒಂದು ವರ್ಷಗಳವರೆಗೆ ಮತ ಚಲಾಯಿಸುವ ಹಕ್ಕು ಇರುವುದಿಲ್ಲ. ಹಿಂದಿನ ಐದು ಸಹಕಾರ ವರ್ಷಗಳ ಪೈಕಿ ಯಾವುದೇ ಎರಡು ಸಹಕಾರ ವರ್ಷಗಳಲ್ಲಿ ಬ್ಯಾಂಕಿನ ಉಪವಿಧಿಗಳಲ್ಲಿ ನಿರ್ದಿಷ್ಟ ಪಡಿಸಿದ ಕನಿಷ್ಠ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಬಳಸಿಕೊಳ್ಳಲು ತಪ್ಪಿದ ಸದಸ್ಯರಿಗೆ ಒಂದು ವರ್ಷದವರೆಗೆ ಮತ ಚಲಾಯಿಸುವ ಹಕ್ಕು ಇರುವುದಿಲ್ಲ.
2. ಸಹಕಾರ ಸಂಘಗಳ ಕಾಯ್ದೆ 1959 ಕಲಂ 27(4) ರನ್ವಯ ಅರ್ಹ ಸದಸ್ಯರ ಶೇಕಡಾ 10 ರಷ್ಟು ಅಥವಾ ಕನಿಷ್ಠ ಒಂದು ಸಾವಿರ ಸದಸ್ಯರು ವಾರ್ಷಿಕ ಸಾಮಾನ್ಯ ಸಭೆಗೆ ಹಾಜರಾಗದೆ ಇದ್ದ ಪಕ್ಷದಲ್ಲಿ ವಾರ್ಷಿಕ ಸಾಮಾನ್ಯ ಸಭೆ ಜರಗಿಸಲು ಬರುವುದಿಲ್ಲ. ಇದರಿಂದ ಸದಸ್ಯರಿಗೆ ಡಿವಿಡೆಂಡ್ ಪಾವತಿ ಇತ್ಯಾದಿ ಬ್ಯಾಂಕಿನ ವ್ಯವಹಾರಕ್ಕೆ ಕಾನೂನು ರೀತ್ಯಾ ಅಡಚಣೆ ಉಂಟಾಗುತ್ತದೆ. ಆದುದರಿಂದ ತಾವು ತಪ್ಪದೆ ಹಾಜರಾಗುವಂತೆ ವಿನಂತಿಸಲಾಗಿದೆ.
3. ದಿನಾಂಕ 30–06–2026 ರಂದು ಹೊಸದಿಗಂತ ದಿನಪತ್ರಿಕೆಯಲ್ಲಿ ಪ್ರಕಟಿತ ಆಸ್ತಿ ಜವಾಬ್ದಾರಿ ತ:ಖ್ತೆ ಅಥವಾ ಅದಕ್ಕೆ ಸಂಬಂಧಪಟ್ಟ ತಃಖ್ತೆಗಳ ಬಗ್ಗೆ ಅಥವಾ ಇತರೇ ಯಾವುದೇ ವಿಷಯದ ಬಗ್ಗೆ ಸುಸ್ತಿದಾರರಲ್ಲದ ಸದಸ್ಯರು ಸ್ಪಷ್ಟೀಕರಣ ಬಯಸಿದಲ್ಲಿ ಸಭೆಯು ನಡೆಯುವುದಕ್ಕೆ 3 ದಿವಸ ಮುಂಚಿತವಾಗಿ ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಿಗೆ ಲಿಖಿತವಾಗಿ ತಿಳಿಸತಕ್ಕದ್ದು (ಉಪವಿಧಿ ಸಂಖ್ಯೆ 42(3))
4. 2025–26 ನೇ ಸಾಲಿನ ವಾರ್ಷಿಕ ವರದಿಯ ಸಂಪೂರ್ಣ ವಿವರಗಳನ್ನು ಬ್ಯಾಂಕಿನ ವೆಬ್‌ಸೈಟ್ (www.gokarnanath.bank.in) ನಲ್ಲಿ ಪ್ರಕಟಿಸಲಾಗಿದೆ. ಆದಾಗ್ಯೂ 2025–26 ನೇ ಸಾಲಿನ ವಾರ್ಷಿಕ ವರದಿಯ ಪ್ರತಿಯನ್ನು ಅಪೇಕ್ಷಿತ ಸದಸ್ಯರು ಅಂಚೆ ಮೂಲಕ ಲಿಖಿತ ಮನವಿ ಸಲ್ಲಿಸಿ ಬ್ಯಾಂಕಿನ ಆಡಳಿತ ಕಛೇರಿಯಿಂದ ದಿನಾಂಕ 01–09–2026 ರ ಮುಂಚಿತವಾಗಿ ಪಡೆದುಕೊಳ್ಳಬಹುದು. ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಹಾಜರಿರುವ ಎಲ್ಲಾ ಸದಸ್ಯರುಗಳಿಗೆ ವಾರ್ಷಿಕ ವರದಿ ಪುಸ್ತಕವನ್ನು ವಿತರಿಸಲಾಗುವುದು.
5. ಸದಸ್ಯರು ಡಿವಿಡೆಂಡನ್ನು ಪಡೆಯದೆ ಇದ್ದ ಪಕ್ಷದಲ್ಲಿ ಮೂರು ವರ್ಷಕ್ಕೆ ಮೇಲ್ಪಟ್ಟು ಬಾಕಿ ಇರುವ ಪಾಲು ಮುನಾಫೆಯನ್ನು 31–12–2026 ರ ನಂತರ ಬ್ಯಾಂಕಿನ ಮೀಸಲು ನಿಧಿ (ರಿಸರ್ವ್‌ಫಂಡ್) ಗೆ ಸೇರಿಸಲಾಗುವುದು. ಡಿವಿಡೆಂಡ್ ಪಡೆಯದ ಸದಸ್ಯರು ಬ್ಯಾಂಕನ್ನು ಸಂಪರ್ಕಿಸಲು ತಿಳಿಸಲಾಗಿದೆ. ಈ ಬಗ್ಗೆ ಇದೇ ನೋಟೀಸು ಆಗಿರುತ್ತದೆ (ಉಪವಿಧಿ ಸಂಖ್ಯೆ 111). ಆದುದರಿಂದ ಸನ್ಮಾನ್ಯ ಸದಸ್ಯರು ತಮ್ಮ ಡಿವಿಡೆಂಡನ್ನು ಆದಷ್ಟು ಶೀಘ್ರದಲ್ಲಿ ಪಡಕೊಳ್ಳುವರೇ ಕೋರಲಾಗಿದೆ.
6. ಭಾರತೀಯ ರಿಸರ್ವ್ ಬ್ಯಾಂಕಿನ ಅದೇಶದನ್ವಯ ಬ್ಯಾಂಕಿನಲ್ಲಿ 10 ವರ್ಷ ಮತ್ತು ಮೇಲ್ಪಟ್ಟ ಅವಧಿಯವರೆಗೆ ವ್ಯವಹಾರ ಮಾಡದೇ ಚಾಲನೆಯಲ್ಲಿಲ್ಲದ ಠೇವಣಾತಿ (In-operative Deposit) ಗಳ ಮೊಬಲಗನ್ನು ಡೆಪಾಸಿಟ್ ಎಜುಕೇಶನ್ ಅವೇರ್‌ನೆಸ್ ಸ್ಕೀಮ್ 2014 (Deposit Education Awareness Scheme 2014) ರನ್ವಯ ಭಾರತೀಯ ರಿಸರ್ವ್ ಬ್ಯಾಂಕಿಗೆ ಪ್ರತಿ ತಿಂಗಳು ವರ್ಗಾಯಿಸಬೇಕಾಗುತ್ತದೆ. ಆದುದರಿಂದ ಎಲ್ಲಾ ಗ್ರಾಹಕರು ತಮ್ಮ ಎಲ್ಲಾ ಖಾತೆಗಳು ಚಾಲ್ತಿಯಲ್ಲಿರುವಂತೆ ನೋಡಿಕೊಳ್ಳಬೇಕಾಗಿ ವಿನಂತಿಸಲಾಗಿದೆ.
7. 2025–26 ನೇ ಸಾಲಿನ ಡಿವಿಡೆಂಡನ್ನು ಸಂಚಯ ಖಾತೆ ಹೊಂದಿರುವ ಸದಸ್ಯರ ಖಾತೆಗಳಿಗೆ ಜಮಾ ಮಾಡಲಾಗುವುದು. ಸಂಚಯ ಖಾತೆ ಹೊಂದಿರದ ಸದಸ್ಯರು ತಮ್ಮ ಹತ್ತಿರದ ಶಾಖೆಯಲ್ಲಿ ಸಂಚಯ ಖಾತೆಯನ್ನು ತೆರೆದು ಡಿವಿಡೆಂಡ್ ಪಾವತಿಗೆ ಅನುವು ಮಾಡಿಕೊಡಬೇಕಾಗಿ ವಿನಂತಿ.
8. ಸದಸ್ಯರು ಮಹಾಸಭೆಗೆ ಬರುವಾಗ ಬ್ಯಾಂಕು ನೀಡಿರುವ ಗುರುತಿನ ಕಾರ್ಡ್ (I.D. Card) ನ್ನು ಕಡ್ಡಾಯವಾಗಿ ತರಬೇಕು. ತಪ್ಪಿದಲ್ಲಿ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಭಾಗವಹಿಸುವರೇ ಅವಕಾಶವಿರುವುದಿಲ್ಲ (ಉಪವಿಧಿ ಸಂಖ್ಯೆ 24).
9. ಸದಸ್ಯರು ಮಹಾಸಭೆಗೆ ಬರುವಾಗ ಈ ನೋಟೀಸನ್ನು ದಯಮಾಡಿ ತರಬೇಕಾಗಿ ವಿನಂತಿ.

# 2024–25ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯ ನಡವಳಿಕೆಗಳು

## ವಾರ್ಷಿಕ ಸಾಮಾನ್ಯ ಸಭೆ

**ದಿನಾಂಕ 14–09–2025 ರ ರವಿವಾರ ಪೂರ್ವಾಹ್ನ ಘಂಟೆ 10.30 ಕ್ಕೆ ಸರಿಯಾಗಿ ಜರಗಿದ ಬ್ಯಾಂಕಿನ 101 ನೇ ವರ್ಷದ ಸಾಮಾನ್ಯ ಸಭೆಯ ತರಾವುಗಳು.**

## ಕಾರ್ಯಕ್ರಮ

ಹಾಜರು: ಶ್ರೀ **ಚಂದ್ರಶೇಖರ್ ಕುಮಾರ್** ಕೂಡ 1362 ಮಂದಿ ಸದಸ್ಯರು.

| **ನಿರ್ಣಯ ನಂಬ್ರ : 1** | |
|---|---|
| ಪ್ರಾರ್ಥನೆ | ಬ್ಯಾಂಕಿನ ಸಿಬ್ಬಂದಿ ಶ್ರೀಮತಿ ಸುನೀತಾ ಬಂಗೇರ ರವರು ಪ್ರಾರ್ಥನೆಯನ್ನು ನೆರವೇರಿಸಿದರು. ನಮ್ಮ ಬ್ಯಾಂಕಿನ ಸ್ಥಿರಾಸ್ತಿ ಮೌಲ್ಯಮಾಪಕರಾದ ಶ್ರೀ ಅಶೋಕ್ ಕುಮಾರ್, 'ಆತ್ಮಶಕ್ತಿ' ಪತ್ರಿಕೆಯ ಸಂಪಾದಕರಾದ ಶ್ರೀ ಕೆ. ವಾಮನ್, ಎಸ್.ಸಿ.ಡಿ.ಸಿ.ಸಿ ಬ್ಯಾಂಕಿನ ಮಾಜಿ ಸಿಬ್ಬಂದಿಯಾದ ಶ್ರೀ ಅಶೋಕ್, ಕರ್ನಾಟಕ ಬ್ಯಾಂಕಿನ ಮಾಜಿ ಸಿಬ್ಬಂದಿಯಾದ ಶ್ರೀ ಕೆ. ದಿನೇಶ್ ರಾಜ್ ಹಾಗೂ ಬ್ಯಾಂಕಿನ ಸದಸ್ಯರಾದ ಶ್ರೀಮತಿ ಸಂಧ್ಯಾಲತಾರವರು ದೀಪ ಬೆಳಗಿಸಿ ಕಾರ್ಯಕ್ರಮ ಉದ್ಘಾಟಿಸಿದರು. |

| **ನಿರ್ಣಯ ನಂಬ್ರ : 2** | |
|---|---|
| ಅಧ್ಯಕ್ಷರಿಂದ ಪ್ರಾಸ್ತಾವಿಕ ಭಾಷಣ | ಬ್ಯಾಂಕಿನ ಅಧ್ಯಕ್ಷರು ಸರ್ವ ಸದಸ್ಯರನ್ನು ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. |

| **ನಿರ್ಣಯ ನಂಬ್ರ : 3** | |
|---|---|
| 2024–25ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯ ನೋಟೀಸನ್ನು ಓದಿ ದಾಖಲು ಮಾಡುವುದು. | ಓದಿ ದಾಖಲಿಸಲಾಯಿತು. |

| **ನಿರ್ಣಯ ನಂಬ್ರ : 4** | |
|---|---|
| ದಿನಾಂಕ 22–09–2024ರಂದು ಜರಗಿದ ವಾರ್ಷಿಕ ಸಾಮಾನ್ಯ ಸಭೆಯ ನಡವಳಿಕೆಗಳನ್ನು ಓದಿ ದೃಢೀಕರಿಸುವ ಕುರಿತು. | ಬ್ಯಾಂಕಿನ ಪ್ರಭಾರ ಜನರಲ್ ಮೆನೇಜರ್ ಶ್ರೀಮತಿ ವಿಜಯ ಎಂ. ಕೋಟ್ಯಾನ್‌ರವರು ದಿನಾಂಕ 22–9–2024 ರಂದು ಜರಗಿದ ವಾರ್ಷಿಕ ಸಾಮಾನ್ಯ ಸಭೆಯ ನಡವಳಿಕೆಗಳನ್ನು ಓದಿದರು. ಮೆ.ನಂ. 15722 ಶ್ರೀ ರಾಕೇಶ್ ಕುಮಾರ್ ಬಿ. ರವರು ಅನುಮೋದಿಸಿ ಸರ್ವಾನುಮತದಿಂದ ದೃಢೀಕರಿಸಲಾಯಿತು. |

| ನಿರ್ಣಯ ಸಂಬ್ರ : 5 | |
|---|---|
| ಬ್ಯಾಂಕಿನ 2024–25ನೇ ವರ್ಷದ ಬಾಬ್ತು ನಿರ್ದೇಶಕ ಮಂಡಲಿ ಸಾದರಪಡಿಸಿದ ವಾರ್ಷಿಕ ವರದಿಯನ್ನು ಅನುಮೋದಿಸಿ ದಾಖಲಿಸುವ ಕುರಿತು. | ಮೆ.ನಂ. 33436 ಶ್ರೀ ಕಿರಣ್ ಕುಮಾರ್‌ರವರು 2024–25ನೇ ಸಾಲಿನ ವಾರ್ಷಿಕ ವರದಿ ಹಾಗೂ ಸಾಮಾನ್ಯ ಸಭೆಯ ನೋಟೀಸ್ ಅವರಿಗೆ ತಲುಪದಿರುವ ಕಾರಣ ಕೇಳಿದರು. ಈ ಬಗ್ಗೆ ಬ್ಯಾಂಕಿನ ಪ್ರಭಾರ ಜನರಲ್ ಮೆನೇಜರ್‌ರವರು ವಾರ್ಷಿಕ ಸಾಮಾನ್ಯಸಭೆಯ ನೋಟೀಸನ್ನು ಎಲ್ಲಾ ಸದಸ್ಯರಿಗೆ ಅಂಚೆ ಮುಖೇನ ಕಳುಹಿಸಲಾಗಿರುತ್ತದೆ. ಅಲ್ಲದೆ ದಿನಾಂಕ 30–08–2025ರ ಉದಯವಾಣಿ ದಿನಪತ್ರಿಕೆಯಲ್ಲಿ ಪ್ರಕಟಿಸಲಾಗಿರುತ್ತದೆ ಹಾಗೂ ವಾರ್ಷಿಕ ವರದಿಯನ್ನು ಬ್ಯಾಂಕಿನ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗಿದೆ ಎಂದು ತಿಳಿಸಿದರು.<br>ಮೆ.ನಂ. 18569 ಶ್ರೀ ಕೆ. ದಿನೇಶ್ ರಾಜ್ ರವರು ಕಳೆದ ವರ್ಷ ಹೂಡಿಕೆ ಏರಿಳಿತ ನಿಧಿಯಲ್ಲಿ ರೂ. 50 ಲಕ್ಷ ಇದ್ದದ್ದು ಪ್ರಸ್ತುತ ಸಾಲಿನಲ್ಲಿ ರೂ.112.50 ಲಕ್ಷಕ್ಕೆ ಏರಿಸಲಾಗಿದೆ. ಒಮ್ಮಿಂದೊಮ್ಮೆಲೆ ರೂ. 62.50 ಲಕ್ಷ ಏರಿಕೆಯಾದ ಬಗ್ಗೆ ಪ್ರಶ್ನಿಸಿದರು ಹಾಗೂ ಇದರಿಂದ ಬ್ಯಾಂಕಿನ ಸದಸ್ಯರಿಗೆ ನೀಡಬಹುದಾದ ಡಿವಿಡೆಂಡ್‌ಗೆ ತೊಂದರೆಯಾಗುವ ಬಗ್ಗೆ ಪ್ರಶ್ನಿಸಿದರು.<br>ಈ ಬಗ್ಗೆ ಬ್ಯಾಂಕಿನ ಪ್ರಭಾರ ಜನರಲ್ ಮೆನೇಜರ್‌ರವರು ಭಾರತೀಯ ರಿಸರ್ವ್ ಬ್ಯಾಂಕಿನ ನಿಯಮಾನುಸಾರ ಬ್ಯಾಂಕು ಸರಕಾರಿ ಭದ್ರತೆಯಲ್ಲಿ ಮಾಡಿರುವ ಹೂಡಿಕೆಯ ಮೇಲೆ ಹಿಂದಿನ ಸಾಲಿನಲ್ಲಿ ಕಾದಿರಿಸದೆ ಇದ್ದುದರಿಂದ ಪ್ರಸ್ತುತ ಸಾಲಿನಲ್ಲಿ ಕಾದಿರಿಸಿದ್ದನ್ನು ವಿವರಿಸಿದರು.<br>ಮೆ.ನಂ. 15722 ಶ್ರೀ ರಾಕೇಶ್ ಕುಮಾರ್ ಬಿ. ರವರು ಸಹಕಾರ ಕಾಯ್ದೆಯನ್ವಯ ಬ್ಯಾಂಕಿನ ಸಹಸದಸ್ಯರ ಸಂಖ್ಯೆ ಸಾಮಾನ್ಯ ಸದಸ್ಯರ ಶೇಕಡಾ 15 ಮೀರಿದ್ದು ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ಸಲಹೆ ನೀಡಿದರು.<br>ಸಹಸದಸ್ಯರನ್ನು ಸಾಮಾನ್ಯ ಸದಸ್ಯರನ್ನಾಗಿ ಪರಿವರ್ತಿಸುವ ಪ್ರಕ್ರಿಯೆ ಚಾಲ್ತಿಯಲ್ಲಿರುವ ಬಗ್ಗೆ ಬ್ಯಾಂಕಿನ ಪ್ರಭಾರ ಜನರಲ್ ಮೆನೇಜರ್‌ರವರು ಸಮಜಾಯಿಷಿ ನೀಡಿದರು.<br>ಮೆ.ನಂ. 15722 ಶ್ರೀ ರಾಕೇಶ್ ಕುಮಾರ್ ಬಿ. ರವರು ಅನುಮೋದಿಸಿ ಸರ್ವಾನುಮತದಿಂದ ಅಂಗೀಕರಿಸಲಾಯಿತು. |

| ನಿರ್ಣಯ ಸಂಬ್ರ : 6 | |
|---|---|
| 2024–25ನೇ ವರ್ಷದ ಆಯವ್ಯಯ ಅಂದಾಜು ಬಜೆಟ್‌ಗಿಂತ ಹೆಚ್ಚಿಗೆ ಆದ ಖರ್ಚನ್ನು ಅನುಮೋದನೆ ಮಾಡುವ ಕುರಿತು. | ಮೆ.ನಂ. 15722 ಶ್ರೀ ರಾಕೇಶ್ ಕುಮಾರ್ ಬಿ. ರವರು ಸಿಬ್ಬಂದಿ ಗ್ರಾಚ್ಯುವಿಟಿ ಬಜೆಟಿಗಿಂತ ರೂ. 17,09,476/– ಜಾಸ್ತಿಯಾಗಿರುವ ಬಗ್ಗೆ ಪ್ರಶ್ನಿಸಿದರು. ಈ ಬಗ್ಗೆ ಬ್ಯಾಂಕಿನ ಪ್ರಭಾರ ಜನರಲ್ ಮೆನೇಜರ್ ಸಮಜಾಯಿಷಿ ನೀಡಿದರು.<br>ಮೆ.ನಂ. 18569 ಶ್ರೀ ಕೆ ದಿನೇಶ್ ರಾಜ್ ರವರು ಆಡಳಿತ ಮಂಡಲಿ ಸಭೆಯ ಖರ್ಚು ಬಜೆಟಿಗಿಂತ ಕಡಿಮೆಯಾದ ಬಗ್ಗೆ ಆಡಳಿತ ಮಂಡಲಿಯನ್ನು ಪ್ರಶಂಶಿಸಿದರು.<br>ಮೆ.ನಂ. 14207 ಶ್ರೀ ಸದಾನಂದ ಅಮೀನ್‌ರವರು ಅನುಮೋದಿಸಿ ಸರ್ವಾನುಮತದಿಂದ ಅಂಗೀಕರಿಸಲಾಯಿತು. |

| ನಿರ್ಣಯ ಸಂಬ್ರ : 7 | |
|---|---|
| 2024–25ನೇ ಸಾಲಿನಲ್ಲಿ ಧರ್ಮದ ನಿಧಿ ಖಾತೆಯಿಂದ ಪಾವತಿಸಿದ ರೂ.50,000/– ದೇಣಿಗೆಯ ಸ್ಥಿರೀಕರಣ. | ಮೆ.ನಂ. 15090 ಶ್ರೀ ಪುರುಷೋತ್ತಮ ಸುವರ್ಣರವರು ಅನುಮೋದಿಸಿ, ಸರ್ವಾನುಮತದಿಂದ ಸ್ಥಿರೀಕರಿಸಲಾಯಿತು. |

| ನಿರ್ಣಯ ಸಂಬ್ರ : 8 | |
|---|---|
| 2024–25ನೇ ಸಾಲಿನ ಆಡಿಟ್ ರಿಪೋರ್ಟ್ ಲೆಕ್ಕ ಪರಿಶೋಧಕರಿಂದ ದೃಢೀಕರಿಸಲ್ಪಟ್ಟ ಆರ್ಥಿಕ ತಃಖ್ತೆಗಳ ಸ್ಥಿರೀಕರಣ, ಲೆಕ್ಕ ಪರಿಶೋಧಕರ ಅಭಿಪ್ರಾಯ, ಸೂಚನೆ ಮತ್ತು ನ್ಯೂನತೆಗಳಿಗೆ ನಿರ್ದೇಶಕ ಮಂಡಲಿ ನೀಡಿದ ಸಮಜಾಯಿಷಿ ವರದಿಯನ್ನು ಓದಿ ಸ್ಥಿರೀಕರಿಸುವುದು. | ಮೆ.ನಂ. 18569 ಶ್ರೀ ಕೆ. ದಿನೇಶ್ ರಾಜ್ ರವರು ಹಾಗೂ ಮೆ.ನಂ. 3621 ಅಶೋಕ್ ಕುಮಾರ್ ರವರು ಈ ಸಾಲಿನಲ್ಲಿ ತೆರಿಗೆಗೆ ಮುನ್ನ ರೂ. 2,11,55,033/– ಲಾಭ ಗಳಿಸಿದ್ದು, ನಿವ್ವಳ ಲಾಭ 95 ಲಕ್ಷಕ್ಕೆ ಇಳಿಕೆ ಆಗಿರುವ ಬಗ್ಗೆ ಪ್ರಶ್ನಿಸಿದರು. ಈ ಬಗ್ಗೆ ಬ್ಯಾಂಕಿನ ಪ್ರಭಾರ ಜನರಲ್ ಮೆನೇಜರ್‌ರವರು ಸಮಜಾಯಿಷಿ ನೀಡಿದರು.<br>ಮೆ.ನಂ. 27895 ಸಂಜೀವ ಶೆಟ್ಟಿರವರು ಎಲ್ಲಾ ಬ್ಯಾಂಕ್‌ಗಳು ಹೆಚ್ಚಿಗೆ ಡಿವಿಡೆಂಡ್ ನೀಡುತ್ತಿದ್ದು ಕನಿಷ್ಠ ಶೇಕಡಾ 10 ನೀಡುವಂತೆ ಸಲಹೆ ನೀಡಿದರು.<br>ಈ ಬಗ್ಗೆ ಬ್ಯಾಂಕಿನ ಅಧ್ಯಕ್ಷರು ಸಮಜಾಯಿಷಿ ನೀಡಿದರು. ಮೆ.ನಂ. 14207 ಶ್ರೀ ಸದಾನಂದ ಅಮೀನ್‌ರವರು ಅನುಮೋದಿಸಿ, ಸರ್ವಾನುಮತದಿಂದ ಅಂಗೀಕರಿಸಲಾಯಿತು. |

| ನಿರ್ಣಯ ಸಂಬ್ರ : 9 | |
|---|---|
| 2024–25ನೇ ಸಾಲಿನ ನಿವ್ವಳ ಲಾಭ ರೂ. 95,50,463.06ನ್ನು ನಿರ್ದೇಶಕ ಮಂಡಲಿಯ ಶಿಫಾರಸು ಮೇರೆಗೆ ವಿಂಗಡಣೆ ಮಾಡುವ ಕುರಿತು. | ಮೆ.ನಂ.27895 ಶ್ರೀ ಸಂಜೀವ ಶೆಟ್ಟಿ, ಮೆ.ನಂ. ಕೆ.1440 ಶ್ರೀ ಮಿತ್ರ ಹೇರಾಜೆ, ಮೆ.ನಂ. 13440 ಶ್ರೀ ಮಂಗಳನಾಥ್, ಹಾಗೂ ಮೆ.ನಂ. 34287 ಗೋವಿಂದ ಮಟ್ಟಿಯವರು ಬ್ಯಾಂಕ್ ಶೇ. 6 ಡಿವಿಡೆಂಡ್ ನೀಡುವುದಾಗಿ ತಿಳಿಸಿದ್ದು ಇದು ತುಂಬಾ ಕಡಿಮೆ, ಇದನ್ನು ಬ್ಯಾಂಕು ಠೇವಣಾತಿ ಮೇಲೆ ನೀಡುವ ಬಡ್ಡಿ ದರಕ್ಕಿಂತ ಹೆಚ್ಚಿಸಿ ಡಿವಿಡೆಂಡ್ ನೀಡುವಂತೆ ಆಗ್ರಹಿಸಿದರು.<br>ಈ ಬಗ್ಗೆ ಅಧ್ಯಕ್ಷರು ಸಮಜಾಯಿಷಿ ನೀಡಿದರು. ಮೆ.ನಂ. 33324 ಶ್ರೀ ಚಿತ್ತರಂಜನ್ ಬೋಳಾರ್ ರವರು ಅನುಮೋದಿಸಿ, ಸರ್ವಾನುಮತದಿಂದ ಅಂಗೀಕರಿಸಲಾಯಿತು. |

| ನಿರ್ಣಯ ಸಂಬ್ರ : 10 | |
|---|---|
| ಬ್ಯಾಂಕಿನ ಸಿಬ್ಬಂದಿಗಳಿಗೆ 2024–25ನೇ ಸಾಲಿಗೆ ಬೋನಸ್ ಕಾಯ್ದೆ 1965 ರನ್ವಯ ಬೋನಸ್ಸಿಗೆ ಅರ್ಹರಲ್ಲದ ಸಿಬ್ಬಂದಿಗಳಿಗೆ ಎಕ್ಸ್‌ಗ್ರೇಷಿಯಾ ಪಾವತಿಸುವ ಕುರಿತು. | ಮೆ.ನಂ. 1509 ಶ್ರೀ ಪುರುಷೋತ್ತಮ ಸುವರ್ಣರವರು ಬ್ಯಾಂಕಿನ ಸಿಬ್ಬಂದಿಗಳು ಠೇವಣಾತಿಯನ್ನು ಹೆಚ್ಚಿಸಿ ಬ್ಯಾಂಕಿನ ಬೆಳವಣಿಗೆಗೆ ಸಹಕರಿಸುವಂತೆ ಸಲಹೆ ನೀಡಿದರು.<br>ಬ್ಯಾಂಕಿನ ಉಪಾಧ್ಯಕ್ಷರು ಬ್ಯಾಂಕಿನ ಸಿಬ್ಬಂದಿಗಳಿಗೆ ಕಾಲಕಾಲಕ್ಕೆ ಅನ್ವಯವಾಗುವ ತುಟ್ಟಿಭತ್ಯೆಯನ್ನು ನೀಡದಿರುವ ಕಾರಣ ಎಕ್ಸ್‌ಗ್ರೇಷಿಯಾ ನೀಡಲು ಸಭೆಯ ಅನುಮತಿಯನ್ನು ಕೋರಿದರು.<br>ಮೆ.ನಂ. 15090 ಶ್ರೀ ಪುರುಷೋತ್ತಮ ಸುವರ್ಣರವರು ಅನುಮೋದಿಸಿ, ಸರ್ವಾನುಮತದಿಂದ ಅಂಗೀಕರಿಸಲಾಯಿತು. |

| ನಿರ್ಣಯ ನಂಬ್ರ : 11 | |
|---|---|
| ಬ್ಯಾಂಕಿನ 2025–26ನೇ ಸಾಲಿಗೆ ರಿಸರ್ವ್ ಬ್ಯಾಂಕ್‌ನ ನಿರ್ದೇಶನ ಪ್ರಕಾರ ರಚಿತ ನೇಮಕಾತಿ ಪಾಲಿಸಿಯಂತೆ ಶಾಸನಬದ್ಧ ಲೆಕ್ಕ ಪರಿಶೋಧಕರ ನೇಮಕಕ್ಕೆ ಅನುಮೋದನೆ ಕುರಿತು. | 2025–26 ನೇ ಸಾಲಿಗೆ ರಿಸರ್ವ್ ಬ್ಯಾಂಕ್‌ನ ಅನುಮತಿಯಂತೆ M/S BVC & Co. ರವರನ್ನು ಬ್ಯಾಂಕಿನ ಶಾಸನಬದ್ಧ ಲೆಕ್ಕಪರಿಶೋಧಕರಾಗಿ ನೇಮಕಾತಿ ಬಗ್ಗೆ ಬ್ಯಾಂಕಿನ ಪ್ರಭಾರ ಜನರಲ್ ಮೆನೇಜರ್‌ರವರು ತಿಳಿಸಿದರು.<br>ಮೆ.ನಂ. 14207 ಶ್ರೀ ಸದಾನಂದ ಅಮೀನ್ ರವರು ಅನುಮೋದಿಸಿದರು. |

| ನಿರ್ಣಯ ನಂಬ್ರ : 12 | |
|---|---|
| 2024–25ನೇ ವರ್ಷದ ಆಯವ್ಯಯ ಅಂದಾಜು ಪಟ್ಟಿಯನ್ನು ಮಂಜೂರು ಮಾಡುವ ಕುರಿತು. | ಮೆ.ನಂ. 15722 ಶ್ರೀ ರಾಕೇಶ್ ಕುಮಾರ್ ಬಿ. ರವರು EDLI, Federation Membership fees, CIBIL ಗಳ ಬಗ್ಗೆ ವಿವರಣೆ ಕೇಳಿದರು. ಮೆ.ನಂ. 18569 ಶ್ರೀ ಕೆ. ದಿನೇಶ್ ರಾಜ್ ರವರು ಗ್ರಾಚ್ಯುವಿಟಿ ಹಾಗೂ ಎ.ಟಿ.ಎಂ ಖರ್ಚಿನ ಬಗ್ಗೆ ಪ್ರಶ್ನಿಸಿದರು.<br>ಮೆ.ನಂ. 13440 ಶ್ರೀ ಮಂಗಳನಾಥ್ ರವರು ಹೊಸ ಶಾಖೆ ತೆರೆಯಲು ಬಜೆಟ್ ಕಾದಿರಿಸದಿರುವ ಬಗ್ಗೆ ಪ್ರಶ್ನಿಸಿದರು ಹಾಗೂ ಶಾಖೆಯನ್ನು ಸ್ಥಳಾಂತರಗೊಳಿಸಿ ನವೀಕರಿಸುವುದರಿಂದ ಬ್ಯಾಂಕಿನ ಬೆಳವಣಿಗೆ ತಿಳಿಯುವುದಿಲ್ಲ ಎಂದು ಸಲಹೆ ನೀಡಿದರು.<br>ಮೆ.ನಂ. 34287 ಶ್ರೀ ಗೋವಿಂದ ಮಟ್ಟಿಯವರು ದುರಸ್ತಿ ಮತ್ತು ನಿರ್ವಹಣೆಗೆ ರೂ. 25,00,000/– ಕಾದಿರಿಸಿದ ಬಗ್ಗೆ ವಿವರಣೆ ಕೇಳಿದರು.<br>ಈ ಬಗ್ಗೆ ಬ್ಯಾಂಕಿನ ಅಧ್ಯಕ್ಷರು ಸಮಜಾಯಿಷಿ ನೀಡಿದರು ಮತ್ತು ಮೆ.ನಂ. 15090 ಶ್ರೀ ಪುರುಷೋತ್ತಮ ಸುವರ್ಣರವರು ಅನುಮೋದಿಸಿ, ಸರ್ವಾನುಮತದಿಂದ ಅಂಗೀಕರಿಸಲಾಯಿತು. |

| ನಿರ್ಣಯ ನಂಬ್ರ : 13 | |
|---|---|
| 2025–26ನೇ ಸಾಲಿನಲ್ಲಿ ಹಮ್ಮಿಕೊಳ್ಳಲಾಗಿರುವ ಕ್ರಿಯಾ ಯೋಜನೆಯನ್ನು ಅನುಮೋದನೆ ಮಾಡುವ ಕುರಿತು. | ಮೆ.ನಂ. 18569 ಶ್ರೀ ಕೆ. ದಿನೇಶ್ ರಾಜ್‌ರವರು ಸದಸ್ಯರು ವಿನಿಯೋಗಿಸುವ ಪಾಲು ಬಂಡವಾಳಕ್ಕೆ ಮಿತಿ ವಿಧಿಸಿದರೆ, ಸದಸ್ಯರಿಗೆ ನೀಡುವ ಡಿವಿಡೆಂಡ್ ಪಾವತಿ ಹಾಗೂ ಪಾಲು ಬಂಡವಾಳ ಹಿಂಪಡೆಯುವ ಸಮಯದಲ್ಲಿ ಬ್ಯಾಂಕಿಗೆ ಸಂಭವಿಸುವ ತೊಂದರೆಯನ್ನು ತಪ್ಪಿಸಬಹುದು ಎಂದು ಸಲಹೆ ನೀಡಿದರು.<br>ಮೆ.ನಂ. 15098 ಶ್ರೀ ಪುರುಷೋತ್ತಮ ಸುವರ್ಣರವರು ಅನುಮೋದಿಸಿ, ಸರ್ವಾನುಮತದಿಂದ ಅಂಗೀಕರಿಸಲಾಯಿತು. |

| ನಿರ್ಣಯ ನಂಬ್ರ : 14 | |
|---|---|
| ಬ್ಯಾಂಕಿನ ಉಪವಿಧಿಗಳಿಗೆ ತಿದ್ದುಪಡಿ ಅನುಮೋದಿಸುವ ಕುರಿತು | ಮೆ.ನಂ. 11066 ಶ್ರೀ ಕಿಶೋರ್ ಕುವಾರ್, ಮೆ.ನಂ. 31909 ಶ್ರೀ ನಾಮ್‌ದೇವ್‌ರವರು ಬ್ಯಾಂಕಿನ ಉಪವಿಧಿಗಳಿಗೆ ತಿದ್ದುಪಡಿ ಸಂಬಂಧಿಸಿ ಸದಸ್ಯರು ಪಡೆಯುವ ಭದ್ರತಾ ಸಾಲಗಳಿಗೆ ಷೇರುಗಳ ಜೋಡಣೆ ಪ್ರಮಾಣ ಶೇಕಡಾ 2.5 ರಿಂದ ಶೇಕಡಾ 1 ಕ್ಕೆ ಇಳಿಸಿದರೆ ಬ್ಯಾಂಕಿನ ಪಾಲು ಬಂಡವಾಳ ಕಡಿಮೆಯಾಗುತ್ತದೆ ಎಂದು ಸೂಚಿಸಿದರು.<br>ಬ್ಯಾಂಕಿನ ಅಧ್ಯಕ್ಷರು ಈ ತಿದ್ದುಪಡಿಯನ್ನು ಕೈ ಬಿಡುವುದಾಗಿ ತಿಳಿಸಿದರು. |

| ನಿರ್ಣಯ ನಂಬ್ರ : 15 | |
|---|---|
| ಬ್ಯಾಂಕಿನ ಶಾಖೆಗಳಿಗೆ ಸ್ವಂತ ಕಟ್ಟಡವನ್ನು ಖರೀದಿಸುವರೇ ಮಹಾಸಭೆಯ ಅನುಮತಿಗಾಗಿ ಪ್ರಸ್ತಾವನೆ. | ಮೆ.ನಂ. ಕೆ 2756 ಶ್ರೀ ಮಿತ್ರ ಹೇರಾಜೆಯವರು ಸ್ವಂತ ಕಟ್ಟಡ ಖರೀದಿಗೆ ಮೊತ್ತ ಕಾದಿರಿಸದ ಬಗ್ಗೆ ಪ್ರಶ್ನಿಸಿದರು.<br>ಈ ಬಗ್ಗೆ ಬ್ಯಾಂಕಿನ ಪ್ರಭಾರ ಜನರಲ್ ಮೆನೇಜರ್‌ರವರು ಕಟ್ಟಡ ನಿಧಿ ಹೂಡಿಕೆ ಮಾಡಿರುವ ಬಗ್ಗೆ ತಿಳಿಸಿದರು.<br>ಮೆ.ನಂ. ಕೆ 2756 ಶ್ರೀ ಮಿತ್ರ ಹೇರಾಜೆಯವರು ಅನುಮೋದಿಸಿ, ಸರ್ವಾನುಮತದಿಂದ ಅಂಗೀಕರಿಸಲಾಯಿತು. |

| ನಿರ್ಣಯ ನಂಬ್ರ : 16 | |
|---|---|
| ಅಧ್ಯಕ್ಷರ ಅನುಮತಿ ಮೇರೆಗೆ ಇತರ ವಿಷಯಗಳು. | ಮೆ.ನಂ. 15722 ಶ್ರೀ ರಾಕೇಶ್ ಕುವಾರ್ ಬಿ. ರವರು ಬ್ಯಾಂಕಿನ ಕಾರ್ಯವ್ಯಾಪ್ತಿಯು ಇತರ ಜಿಲ್ಲೆಗಳಿಗೂ ವ್ಯಾಪಿಸಿದ್ದು, ಅಲ್ಲಿಯೂ ಬ್ಯಾಂಕಿನ ಶಾಖೆಗಳನ್ನು ತೆರೆಯಬಹುದು ಎಂದು ತಿಳಿಸಿದರು ಮತ್ತು ಎಲ್ಲಾ ಬ್ಯಾಂಕಿನ ಸದಸ್ಯರಿಗೆ ಮತದಾನದ ಹಕ್ಕು ಬಂದರೆ ಒಳ್ಳೆಯದು ಹಾಗೂ ಎಲ್ಲಾ ಸದಸ್ಯರಿಗೆ ಖಾತೆಯಲ್ಲಿ ವ್ಯವಹರಿಸಲು ತಿಳಿಸಿದರೆ ಒಳ್ಳೆಯದು ಎಂದು ತಿಳಿಸಿದರು.<br>ಮೆ.ನಂ. ಕೆ. 2756 ಶ್ರೀ ಮಿತ್ರ ಹೇರಾಜೆಯವರು ಹಿರಿಯ ನಾಗರಿಕರಿಗೆ ಠೇವಣಾತಿ ಮೇಲೆ ಬಡ್ಡಿ ಹೆಚ್ಚಿಗೆ ಪಾವತಿಸುವಂತೆ ಕೋರಿದರು.<br>ಮೆ.ನಂ. 3813 ಶ್ರೀ ಶೇಖರ್ ನಾರಾವಿಯವರು ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ವ್ಯವಸ್ಥೆ ಮಾಡುವರೇ ಸೂಚಿಸಿದರು.<br>ಮೆ.ನಂ. 18569 ಶ್ರೀ ದಿನೇಶ್ ರಾಜ್‌ರವರು ಬ್ಯಾಂಕು 3 ತಿಂಗಳಿಗೊಮ್ಮೆ ವಿಧಿಸುವ ಎಸ್.ಎಂ.ಎಸ್ ಚಾರ್ಜ್‌ನ್ನು ಕಡಿಮೆ ಮಾಡುವಂತೆ ಕೋರಿದರು.<br>ಮೆ.ನಂ. 19876 ಶ್ರೀ ಕೆ. ವಾಮನ್ ರವರು ಬಡ ವಿದ್ಯಾರ್ಥಿಗಳಿಗೆ Education Loan ನೀಡಿದರೆ ಉತ್ತಮ ಎಂದು ಸಲಹೆ ನೀಡಿದರು.<br>ಮೆ.ನಂ. 17075 ಶ್ರೀ ಮಹಾಬಲ ಬಂಗೇರರವರು ಬ್ಯಾಂಕಿನಲ್ಲಿ 17 ಶಾಖೆಗಳಿದ್ದು, ಸಿಬ್ಬಂದಿ ವೃಂದಬಲವನ್ನು ಹೆಚ್ಚಿಸುವಂತೆ ತಿಳಿಸಿದರು.<br>ಬ್ಯಾಂಕಿನ ಅಧ್ಯಕ್ಷರು ಈ ಬಗ್ಗೆ ಸಮಜಾಯಿಷಿ ನೀಡಿದರು.<br>ಮೆ.ನಂ. 15722 ಶ್ರೀ ರಾಕೇಶ್ ಕುಮಾರ್ ಬಿ. ರವರು ಅನುಮೋದಿಸಿ ಸರ್ವಾನುಮತದಿಂದ ಅಂಗೀಕರಿಸಲಾಯಿತು. |

| ನಿರ್ಣಯ ನಂಬ್ರ : 17 | |
|---|---|
| ವಂದನಾರ್ಪಣೆ | ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ ಜಯರಾಮ್ ಪೂಜಾರಿಯವರು ವಂದನಾರ್ಪಣೆ ಸಲ್ಲಿಸಿದರು. |

| ನಿರ್ಣಯ ನಂಬ್ರ : 18 | |
|---|---|
| ರಾಷ್ಟ್ರಗೀತೆ | ರಾಷ್ಟ್ರಗೀತೆಯೊಂದಿಗೆ ಸಭೆಯು ಮುಕ್ತಾಯವಾಯಿತು. |

ಸಹಿ/–
**ಶ್ರೀ ಚಂದ್ರಶೇಖರ್ ಕುಮಾರ್**
ಅಧ್ಯಕ್ಷರು

# ಶ್ರೀ ಗೋಕರ್ಣನಾಥ ಕೋ–ಓಪರೇಟಿವ್ ಬ್ಯಾಂಕ್ ಲಿ., ಮಂಗಳೂರು–575003

## ನಿರ್ದೇಶಕ ಮಂಡಲಿಯ ವರದಿ 2025-2026

ಸನ್ಮಾನ್ಯ ಸದಸ್ಯ ಬಂಧುಗಳೇ,

ನಮ್ಮೆಲ್ಲರ ಅಭಿಮಾನದ ಶ್ರೀ ಗೋಕರ್ಣನಾಥ ಕೋ–ಓಪರೇಟಿವ್ ಬ್ಯಾಂಕ್ ಲಿಮಿಟೆಡ್‌ನ 102 ನೇ ವಾರ್ಷಿಕ ಸಾಮಾನ್ಯ ಸಭೆಗೆ ತಮ್ಮೆಲ್ಲರನ್ನೂ ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ, ದಿನಾಂಕ 31–03–2026 ಕ್ಕೆ ಕೊನೆಗೊಂಡ ಬ್ಯಾಂಕಿನ 2025–26 ನೇ ಸಾಲಿನ ವ್ಯವಹಾರ ಮತ್ತು ಕಾರ್ಯ ಚಟುವಟಿಕೆಗಳ ವರದಿಯನ್ನು ತಮ್ಮ ಮುಂದಿರಿಸಲು ನಿರ್ದೇಶಕ ಮಂಡಲಿಯು ಸಂತೋಷಪಡುತ್ತದೆ.

**1. ಸದಸ್ಯರು ಮತ್ತು ಪಾಲು ಬಂಡವಾಳ:**

| ವಿವರ | ಸಾಮಾನ್ಯ ಸದಸ್ಯರ ಸಂಖ್ಯೆ | ಪಾಲು ಬಂಡವಾಳ (ರೂ) | ಸಹ ಸದಸ್ಯರ ಸಂಖ್ಯೆ | ಪಾಲು ಬಂಡವಾಳ (ರೂ) | ಒಟ್ಟು ಪಾಲು ಬಂಡವಾಳ (ರೂ) |
|---|---|---|---|---|---|
| ವರ್ಷದ ಆದಿಯಲ್ಲಿದ್ದವರು | 15845 | 7,10,32,045.00 | 7653 | 1,90,59,900.00 | 9,00,91,945.00 |
| ವರ್ಷದಲ್ಲಿ ಸೇರಿಸಲ್ಪಟ್ಟವರು | 893 | 32,57,500.00 | 685 | 23,48,500.00 | 56,06,000.00 |
| ವರ್ಷದಲ್ಲಿ ಬಿಟ್ಟು ಹೋದವರು | 310 | 22,00,875.00 | 258 | 9,14,200.00 | 31,15,075.00 |
| ವರ್ಷದ ಅಂತ್ಯದಲ್ಲಿದ್ದವರು | 16428 | 7,20,88,670.00 | 8080 | 2,04,94,200.00 | 9,25,82,870.00 |

ವರ್ಷಾಂತ್ಯದಲ್ಲಿರುವಂತೆ ಒಟ್ಟು 24508 ಸದಸ್ಯರ ಬಾಬ್ತು ಪಾವತಿಯಾದ ಪಾಲು ಬಂಡವಾಳ ರೂ. 9,25,82,870/– ಆಗಿರುತ್ತದೆ

2. **ನಿಧಿಗಳು:** ಬ್ಯಾಂಕು ಈ ಹಿಂದಿನ ಲಾಭಾಂಶದಿಂದ ವಿಂಗಡಿಸಿದ ನಿಧಿಗಳು ಕೂಡಾ ಸಂಚಯನ ಮಾಡಲಾದ ವ ಕಾದಿರಿಸಲಾದ ವಿವಿಧ ನಿಧಿಗಳ ವಿವರಗಳನ್ನು ಈ ಕೆಳಗೆ ಕಾಣಿಸಿದೆ.

| ವಿವರಗಳು | 31.03.2025 ರಲ್ಲಿ (ರೂ.) | 31.03.2026 ರಲ್ಲಿ (ರೂ.) |
|---|---|---|
| 1. ಶಾಸನಬದ್ಧ ಮೀಸಲು | 9,57,38,970.13 | 9,91,47,572.19 |
| 2. ಕಟ್ಟಡ ನಿಧಿ | 3,39,99,736.00 | 3,50,41,930.00 |
| 3. ಹಣ ಹೂಡಿಕೆ ಸವಕಳಿ ಮೀಸಲು | 1,80,50,000.00 | 1,80,50,000.00 |
| 4. ಹೂಡಿಕೆ ಏರಿಳಿತ ನಿಧಿ | 1,12,50,000.00 | 1,12,50,000.00 |
| 5. ಇತರ ನಿಧಿಗಳು/ಮೀಸಲು ವ ಕಾದಿರಿಸಿದ್ದು | | |
| (i) ಸಿಬ್ಬಂದಿ ಕಲ್ಯಾಣ ನಿಧಿ | 11,37,575.00 | 12,07,055.00 |
| (ii) ಧರ್ಮದ ನಿಧಿ | 7,60,523.00 | 7,99,482.00 |
| (iii) ಸದಸ್ಯರ ಮರಣೋತ್ತರ ನಿಧಿ | 12,36,383.00 | 13,05,863.00 |
| (iv) ಜ್ಯುಬಿಲಿ ನಿಧಿ | 12,01,894.00 | 15,49,292.00 |
| (v) ಮಾನಕ ದರ್ಜೆ ಆಸ್ತಿಗೆ ಮೀಸಲು | 50,07,839.00 | 63,16,624.00 |
| (vi) ಸದಸ್ಯರ ಕಲ್ಯಾಣ ನಿಧಿ | 12,61,323.00 | 13,30,803.00 |
| (viii) ಕೆಟ್ಟ ಮತ್ತು ಅನುಮಾನಾಸ್ಪದ ಸಾಲದ ನಿಧಿ | 2,87,92,241.77 | 2,87,92,241.77 |
| **ಜುಮ್ಲಾ** | **19,84,36,484.90** | **20,47,90,862.96** |

ಬ್ಯಾಂಕು ನಿರಂತರವಾಗಿ ಲಾಭ ಗಳಿಸುತ್ತಾ ಬಂದಿರುವ ಕಾರಣ ಗರಿಷ್ಠ ಪ್ರಮಾಣದಲ್ಲಿ ನಿಧಿಗಳ ಸಂಚಯನ ಮಾಡಲು ಸಾಧ್ಯವಾಗಿರುತ್ತದೆ.

ಭಾರತೀಯ ಜೀವ ವಿಮಾ ನಿಗಮದಲ್ಲಿ ಬ್ಯಾಂಕು ಸಿಬ್ಬಂದಿ ಗ್ರಾಚ್ಯುಟಿಯನ್ನು ವಿನಿಯೋಗಿಸಿದ್ದು 31–03–2026 ರ ಅಂತ್ಯಕ್ಕೆ ರೂ.3,09,72,662.78 ಆಗಿರುತ್ತದೆ.

3. **ಠೇವಣಾತಿಗಳು:** ಬ್ಯಾಂಕಿನಲ್ಲಿ ವರದಿ ವರ್ಷದ ಅಂತ್ಯಕ್ಕೆ ರೂ. 21,542.35ಲಕ್ಷ ಠೇವಣಿ ಇರುತ್ತದೆ. ಇವುಗಳ ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

| ವಿವರಗಳು | 31.03.2025 ರಲ್ಲಿ (ರೂ.) | 31.03.2026 ರಲ್ಲಿ (ರೂ.) |
|---|---|---|
| 1. ನಿರಖು ಠೇವಣಿ | 117,08,16,493.00 | 145,33,23,740.00 |
| 2. ಪಿಗ್ಮಿ ಠೇವಣಿ | 11,02,22,191.00 | 12,57,76,645.00 |
| 3. ಆವರ್ತನ ಠೇವಣಿ | 1,88,09,010.00 | 2,72,53,804.00 |
| 4. ಭಾಗ್ಯನಿಧಿ ಠೇವಣಿ | 13,41,50,126.00 | 9,34,65,765.00 |
| 5. ಫಲಿತ ಠೇವಣಿ | 15,69,822.43 | 17,67,706.76 |
| 6. ಸಂಚಯ ಠೇವಣಿ | 39,66,78,817.89 | 42,79,95,026.44 |
| 7. ಚಾಲ್ತಿ ಠೇವಣಿ | 1,86,31,283.06 | 2,28,52,182.01 |
| **ಜುಮ್ಲಾ** | **185,08,77,743.38** | **215,24,34,869.21** |

ಸಿಬ್ಬಂದಿ ಭದ್ರತಾ ಠೇವಣಿ 31–03–2026 ರ ಅಂತ್ಯಕ್ಕೆ ರೂ. 64,56,172.00 ಇರುತ್ತದೆ. ಕಳೆದ ಆರ್ಥಿಕ ವರ್ಷಾಂತ್ಯಕ್ಕೆ ಈ ಮೊತ್ತವು ರೂ. 58,72,926.00 ಆಗಿರುತ್ತದೆ.

ಬ್ಯಾಂಕಿನಲ್ಲಿ ಗ್ರಾಹಕರು ತೊಡಗಿಸಿದ ಠೇವಣಿಗಳು ಡೆಪೊಸಿಟ್ ಇನ್ಸೂರೆನ್ಸ್ ಆಂಡ್ ಕ್ರೆಡಿಟ್ ಗ್ಯಾರಂಟಿ ಕಾರ್ಪೊರೇಶನ್ (DICGC) ನಿಂದ ವಿಮಾ ಭದ್ರತೆಗೊಳಪಟ್ಟು ಸುರಕ್ಷಿತವಾಗಿರುತ್ತದೆ.

4. **ಬ್ಯಾಂಕಿನ ಸಾಲ :** ವರದಿ ವರ್ಷದಲ್ಲಿ ಬ್ಯಾಂಕು ಯಾವುದೇ ರೀತಿಯ ಸಾಲ ಸೌಲಭ್ಯ ಇತರ ಬ್ಯಾಂಕಿನಲ್ಲಿ ಹೊಂದಿರುವುದಿಲ್ಲ.

5. **ದುಡಿಯುವ ಬಂಡವಾಳ ಮತ್ತು ಬಂಡವಾಳ ಸಾಮರ್ಥ್ಯ ಅನುಪಾತ (CRAR):** 2024–25 ನೇ ಸಾಲಿನಲ್ಲಿ ರೂ. 21,394.06 ಲಕ್ಷವಿದ್ದ ದುಡಿಯುವ ಬಂಡವಾಳ 2025–26 ನೇ ಸಾಲಿನಲ್ಲಿ ರೂ. 24,498.09 ಲಕ್ಷಕ್ಕೆ ಏರಿಕೆಯಾಗಿರುತ್ತದೆ. ಭಾರತೀಯ ರಿಸರ್ವ್ ಬ್ಯಾಂಕ್ ನಿಗದಿಪಡಿಸಿರುವ ಕನಿಷ್ಠ ಬಂಡವಾಳ ಸಾಮರ್ಥ್ಯ ಅನುಪಾತವು ಶೇಕಡಾ 9 ಆಗಿದ್ದು, 2025–26ನೇ ಸಾಲಿನಲ್ಲಿ ನಮ್ಮ ಬ್ಯಾಂಕಿನ ಬಂಡವಾಳ ಸಾಮರ್ಥ್ಯ ಅನುಪಾತ (CRAR) ಶೇಕಡಾ 18.28% ಆಗಿರುತ್ತದೆ. ನಮ್ಮ ಬ್ಯಾಂಕಿನ ಬಂಡವಾಳ ಸಾಮರ್ಥ್ಯ ಅನುಪಾತದ ಕಳೆದ ಎರಡು ವರ್ಷಗಳ ವಿವರಗಳು ಈ ಕೆಳಗಿನಂತಿವೆ:

| ದಿನಾಂಕ | ಸಾಧಿಸಬೇಕಾದ ಕನಿಷ್ಠ | ಸಾಧನೆ | ಹೆಚ್ಚಿನ ಸಾಧನೆ |
|---|---|---|---|
| 31–03–2025 | 9% | 23.35 | 14.35% |
| 31–03–2026 | 9% | 18.28 | 9.28% |

6. **ಬ್ಯಾಂಕಿನಿಂದ ನೀಡಲ್ಪಟ್ಟ ಮುಂಗಡ ಸಾಲಗಳು:** ವರದಿ ವರ್ಷದಲ್ಲಿ ಸದಸ್ಯರುಗಳಿಗೆ ಹಾಗೂ ಸಿಬ್ಬಂದಿಗಳಿಗೆ ಕೊಟ್ಟ ಮುಂಗಡ ಸಾಲಗಳು, ಹೊರಬಾಕಿ ಸಾಲ ಮತ್ತು ಇವುಗಳ ಪೈಕಿ ಸುಸ್ತಿ ಬಾಕಿ ವ ಅನುತ್ಪಾದಕ ಸಾಲಗಳ ವಿವರಗಳನ್ನು ಈ ಕೆಳಗೆ ಕೊಡಲಾಗಿದೆ:

| ವಿವರಗಳು | ಸಂಖ್ಯೆ | ಮೊಬಲಗು (ರೂ.) |
|---|---|---|
| ವರ್ಷಾರಂಭದಲ್ಲಿ ಹೊರಬಾಕಿ | 14393 | 127,95,94,903.63 |
| ವರ್ಷದಲ್ಲಿ ಕೊಟ್ಟ ಸಾಲ | 22991 | 219,84,60,967.00 |
| ವರ್ಷದಲ್ಲಿ ವಸೂಲಾದ ಸಾಲ | 23424 | 188,08,85,460.63 |
| ವರ್ಷದ ಅಖೈರಿಗೆ ಹೊರಬಾಕಿ | 13960 | 159,71,70,410.00 |
| ಸುಸ್ತಿಬಾಕಿಯಾದ ಸಾಲ | 2123 | 6,03,03,201.00 |

ಬ್ಯಾಂಕು ನೀಡಿದ ಒಟ್ಟು ಮುಂಗಡ ಸಾಲಗಳಲ್ಲಿ ಶೇ 64.17 ಭಾಗವನ್ನು ಆದ್ಯತಾರಂಗಕ್ಕೆ ನೀಡಲಾಗಿದೆ. ವರದಿ ವರ್ಷದಲ್ಲಿ ಸುಸ್ತಿಬಾಕಿ/ ಅನುತ್ಪಾದಕ ಸಾಲಗಳ ವಸೂಲಿ ಬಗ್ಗೆ ಹೆಚ್ಚಿನ ಪ್ರಯತ್ನ ಜರಗಿಸಲಾಗಿತ್ತು. ವರ್ಷಾಂತ್ಯದಲ್ಲಿ ಸುಸ್ತಿಬಾಕಿ ಸಾಲದ ಪ್ರಮಾಣವು ಶೇಕಡಾ 3.77 ಆಗಿರುತ್ತದೆ.

ಕಳೆದ ಎರಡು ವರ್ಷಗಳಲ್ಲಿ ಇರುವಂತೆ ಬ್ಯಾಂಕಿನ ಅನುತ್ಪಾದಕ ಸಾಲಗಳ ಹಾಗೂ ಈ ಬಗ್ಗೆ ಕಾದಿರಿಸಿದ ಮೊಬಲಗುಗಳ ವಿವರ ಈ ಕೆಳಗಿನಂತಿದೆ:

(ರೂ. ಲಕ್ಷಗಳಲ್ಲಿ)

| ದಿನಾಂಕ | ಒಟ್ಟು ಅನುತ್ಪಾದಕ ಸಾಲಗಳು | | ನಿವ್ವಳ ಅನುತ್ಪಾದಕ ಸಾಲಗಳು | | ಈ ಬಗ್ಗೆ ಕಾದಿರಿಸಿದ ನಿಧಿಯ ವಿವರ | | |
|---|---|---|---|---|---|---|---|
| | ಮೊಬಲಗು (ರೂ.) | ಶೇಕಡಾ | ಮೊಬಲಗು (ರೂ.) | ಶೇಕಡಾ | ಕಾದಿರಿಸಬೇಕಾದ ಮೊಬಲಗು (ರೂ.) | ಕಾದಿರಿಸಿದ ಮೊಬಲಗು (ರೂ.) | ಹೆಚ್ಚಿಗೆ ಕಾದಿರಿಸಿದ ಮೊಬಲಗು (ರೂ.) |
| 31–03–2025 | 276.35 | 2.16 | – | – | 169.01 | 291.08 | 122.07 |
| 31–03–2026 | 180.16 | 1.13 | – | – | 210.20 | 338.00 | 127.80 |

ಭಾರತೀಯ ರಿಸರ್ವ್ ಬ್ಯಾಂಕಿನವರು ಅನುತ್ಪಾದಕ ಸಾಲಗಳ ಬಗ್ಗೆ ವಿಧಿಸಿರುವ ಗರಿಷ್ಠ ಮಟ್ಟವು ಶೇಕಡಾ 10 ಆಗಿದ್ದು ನಮ್ಮ ಬ್ಯಾಂಕಿನಲ್ಲಿ ಅದು ಶೇಕಡಾ 1.13 ಆಗಿರುವುದನ್ನು ಗಮನಿಸಬಹುದು. ಅನುತ್ಪಾದಕ ಸಾಲಗಳ ಬಗ್ಗೆ ಗರಿಷ್ಠ ಪ್ರಮಾಣದ ನಿಧಿಯನ್ನು ಸಂಚಯಿಸಲಾಗಿದೆ.

ಈ ಮೇಲೆ ಕಾಣಿಸಿದ ಸುಸ್ತಿ ಬಾಕಿಯಾದ ಸಾಲಗಳ ಪೈಕಿ 201 ಖಾತೆಗಳ ರೂ. 68.81 ಲಕ್ಷ ರೂಪಾಯಿಗಳ ವಸೂಲಾತಿಗಾಗಿ ಈಗಾಗಲೇ ಕಾನೂನು ಕ್ರಮ ಜರಗಿಸಲಾಗಿದೆ. ಸಾಲಗಾರರು ದಯವಿಟ್ಟು ತಮ್ಮ ಸಾಲದ ಕಂತುಗಳನ್ನು ಸಕಾಲದಲ್ಲಿ ಮರುಪಾವತಿ ಮಾಡಿ ನಮ್ಮೊಂದಿಗೆ ಸಹಕರಿಸಬೇಕಾಗಿ ವಿನಂತಿಸುತ್ತೇವೆ.

ಈ ಮೇಲಿನ ಮುಂಗಡ ಸಾಲಗಳಲ್ಲಿ ಬ್ಯಾಂಕಿನ ಸಿಬ್ಬಂದಿಗಳಿಗೆ ಸೇವಾ ನಿಯಮದಡಿಯಲ್ಲಿ ನೀಡಿದ ಸಾಲ ರೂ. 1,43,52,767.00 ಹೊರಬಾಕಿ ಇರುತ್ತದೆ.

7. **ಹೂಡಿಕೆಗಳು ಮತ್ತು ಚಾಲ್ತಿ ಖಾತೆ ಶಿಲ್ಕು :** ಬ್ಯಾಂಕು ಕಾನೂನುಬದ್ಧವಾಗಿ ಮಾಡಬೇಕಾದ ಹೂಡಿಕೆಗಳು ಒಳಗೊಂಡಂತೆ ಮಾಡಿರುವ ವಿವಿಧ ವಿನಿಯೋಜನೆಗಳ ವಿವರಗಳು ಈ ಕೆಳಗಿನಂತಿರುತ್ತವೆ :

| ವಿವರಗಳು | 31.03.2025 ರಲ್ಲಿ (ರೂ.) | 31.03.2026 ರಲ್ಲಿ (ರೂ.) |
|---|---|---|
| ಎ. ಚಾಲ್ತಿ ಖಾತೆಗಳಲ್ಲಿ | 9,70,33,133.33 | 9,56,64,952.45 |
| ಬಿ. ನಿರಖು ಠೇವಣಿಗಳು | 19,75,21,947.00 | 20,25,00,000.00 |
| ಸಿ. ಸರಕಾರಿ ಭದ್ರತೆಗಳು | 58,55,87,508.00 | 58,54,65,636.00 |
| ಡಿ. ಸಹಕಾರಿ ಸಂಘಗಳ ಪಾಲುಗಳಲ್ಲಿ | | |
| 1) ದ.ಕ. ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್, ಮಂಗಳೂರು | 49,000.00 | 49,000.00 |
| 2) ದ.ಕ. ಸಹಕಾರಿ ಸಕ್ಕರೆ ಕಾರ್ಖಾನೆ, ಬ್ರಹ್ಮಾವರ | 1,000.00 | 1,000.00 |
| 3) ರೆಪ್ಕೋ ಬ್ಯಾಂಕ್ ಲಿ. | 4,000.00 | 4,000.00 |
| **ಜುಮ್ಲಾ** | **88,01,96,588.33** | **88,36,84,588.45** |

8. **ಲಾಭ ಗಳಿಕೆ:** ವರದಿ ವರ್ಷದ ಬಗ್ಗೆ ಮಹಾಸಭೆಯು ಅನುಮೋದನೆ ನೀಡಿದ ಬಜೆಟ್ ಮೇರೆಗೆ ರೂ. 23,40,26,871.88 ಒಟ್ಟು ಆದಾಯ ಗಳಿಸಿ ರೂ. 20,48,55,524.34 ವ್ಯಯ ಮಾಡಿದ ನಂತರ ನಿರ್ವಹಣಾ ಲಾಭ ರೂ. 2,91,71,347.54 ಗಳಿಸಲಾಗಿದೆ. ಈ ಪೈಕಿ ಆದಾಯ ತೆರಿಗೆ ಹೊಂದಾಣಿಕೆಗೆ ಕಾದಿರಿಸಿದ ನಂತರ ನಿವ್ವಳ ಲಾಭ ರೂ. 2,04,65,944.54 ನ್ನು ಉಪವಿಧಿಯ ಅನ್ವಯ ಹಂಚಿಕೆ ಮಾಡುವರೇ ಮಹಾಸಭೆಯ ಅನುಮೋದನೆಯನ್ನು ಕೋರಲಾಗಿದೆ.

9. **ಲೆಕ್ಕ ಪರಿಶೋಧನೆ:** ಭಾರತೀಯ ರಿಸರ್ವ್ ಬ್ಯಾಂಕಿನ ನಿಯಮಾನುಸಾರ ಆಂತರಿಕ ಲೆಕ್ಕ ಪರಿಶೋಧಕರೊಬ್ಬರನ್ನು ನೇಮಿಸಲಾಗಿದ್ದು ಆಂತರಿಕ ಲೆಕ್ಕ ಪರಿಶೋಧನೆಯನ್ನು ಜರಗಿಸಲಾಗುತ್ತಿದೆ. ಆಂತರಿಕ ಲೆಕ್ಕ ಪರಿಶೋಧಕರು ಬ್ಯಾಂಕಿನ ಆಡಳಿತ ಕಛೇರಿ ಮತ್ತು ಶಾಖೆಗಳ ಲೆಕ್ಕ ಪರಿಶೀಲನೆ ಮಾಡಿ ಕಾಲಕಾಲಕ್ಕೆ ಸಲ್ಲಿಸಿದ ವರದಿಗಳನ್ನು ಲೆಕ್ಕ ಪರಿಶೋಧನಾ ಸಮಿತಿ ಸಭೆಗೆ ಮಂಡಿಸಿ, ಪರಿಶೀಲಿಸಿ ಅವಶ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಭಾರತೀಯ ರಿಸರ್ವ್ ಬ್ಯಾಂಕಿನ ಪತ್ರ ಸಂಖ್ಯೆ BLR.DOS.ARG.NO.S-552/11.01.111/2025-26 ದಿನಾಂಕ 09–07–2025 ರ ಪತ್ರದಲ್ಲಿ ನೀಡಿದ ಅನುಮತಿಯಂತೆ ಮೆ॥ ಬಿ ವಿ ಸಿ ಆಂಡ್ ಕಂ. ರವರನ್ನು ಬ್ಯಾಂಕಿನ 2025–26 ನೇ ಸಾಲಿನ ಲೆಕ್ಕ ಪರಿಶೋಧನೆ ಜರಗಿಸುವರೇ ನೇಮಿಸಲಾಗಿರುತ್ತದೆ.

**10. ನಿರ್ದೇಶಕ ಮಂಡಲಿ:** ವರದಿ ವರ್ಷದಲ್ಲಿ 1 ವಾರ್ಷಿಕ ಸಾಮಾನ್ಯ ಸಭೆ, 13 ನಿರ್ದೇಶಕ ಮಂಡಲಿ ಸಭೆ, 7 ವ್ಯವಸ್ಥಾಪನಾ ಸಮಿತಿ ಸಭೆ, 10 ಕಾರ್ಯನಿರ್ವಾಹಕ ಸಮಿತಿ ಸಭೆ, 5 ಲೆಕ್ಕ ಪರಿಶೋಧನಾ ಸಮಿತಿ ಸಭೆ, 1 ಹೂಡಿಕೆ ಸಮಿತಿ, ಆಸ್ತಿ ಮತ್ತು ಜವಾಬ್ದಾರಿ ನಿರ್ವಹಣೆ ಸಮಿತಿ ಸಭೆ 1, ಸೆಟಲ್‌ಮೆಂಟ್ ಅಡ್ವೆಸರಿ ಕಮಿಟಿ–1 ಹಾಗೂ 11 ಸಾಲ ಸಮಿತಿ ಸಭೆಗಳು ಜರಗಿರುತ್ತದೆ. ಬ್ಯಾಂಕಿನಲ್ಲಿ 19 ಜನರಿರುವ (ವೃತ್ತಿಪರ ನಿರ್ದೇಶಕರು ಸೇರಿ) ನಿರ್ದೇಶಕ ಮಂಡಲಿ ಹಾಗೂ 5 ಜನರಿರುವ (2 ನಿರ್ದೇಶಕ ಮಂಡಲಿ ನಿರ್ದೇಶಕರು ಸೇರಿ) ವ್ಯವಸ್ಥಾಪನಾ ಸಮಿತಿಯು ಬ್ಯಾಂಕಿನ ಆಡಳಿತವನ್ನು ನಿರ್ವಹಿಸುತ್ತಿದೆ. ನಿರ್ದೇಶಕ ಮಂಡಲಿ ಸದಸ್ಯರುಗಳು ನಿರಂತರವಾಗಿ ಬ್ಯಾಂಕಿನ ಕಾರ್ಯಕಲಾಪಗಳಲ್ಲಿ ಆಸಕ್ತಿ, ಶ್ರದ್ಧೆ ಹಾಗೂ ಪರಿಣಾಮಕಾರಿಯಾದ ಮಾರ್ಗದರ್ಶನ ನೀಡುತ್ತಿರುವುದರಿಂದ ಬ್ಯಾಂಕಿನ ವ್ಯವಹಾರದಲ್ಲಿ ಪ್ರಗತಿಯನ್ನು ಸಾಧಿಸಲು ಸಾಧ್ಯವಾಗಿದೆ.

**11. ಸಿಬ್ಬಂದಿ ವರ್ಗ:** ಪ್ರಸಕ್ತ ಬ್ಯಾಂಕಿನಲ್ಲಿ 58 ಮಂದಿ ಖಾಯಂ ಸಿಬ್ಬಂದಿಗಳಿದ್ದು ಇದರಲ್ಲಿ ಜನರಲ್ ಮೆನೇಜರ್ (ಪ್ರಭಾರ)–1, ಅಸಿಸ್ಟೆಂಟ್ ಮೆನೇಜರ್/ಶಾಖಾಧಿಕಾರಿಗಳು–6, ಅಕೌಂಟೆಂಟ್–11, ಗುಮಾಸ್ತರು–32 ಮತ್ತು 8 ಮಂದಿ ಜವಾನರು ಸೇವೆ ಸಲ್ಲಿಸುತ್ತಿದ್ದಾರೆ. ಇವರೆಲ್ಲರೂ ಬ್ಯಾಂಕಿನ ಸರ್ವತೋಮುಖ ಏಳಿಗೆಗಾಗಿ ಶ್ರಮವಹಿಸಿ ಕಾರ್ಯ ನಿರ್ವಹಿಸುತ್ತಿದ್ದು ಬ್ಯಾಂಕಿನ ಪ್ರಗತಿಯಲ್ಲಿ ಅವರ ಪಾಲು ಗಣನೀಯ.

**12.** ಬ್ಯಾಂಕಿನ ಎಲ್ಲಾ ಸಿಬ್ಬಂದಿಗಳು ಕಳೆದ ವರ್ಷದ ದಸರಾ ಉತ್ಸವದ ಸಂದರ್ಭದಲ್ಲಿ ಶ್ರೀ ಗೋಕರ್ಣನಾಥ ಕ್ಷೇತ್ರದಲ್ಲಿ ಜರಗಿರುವ ಅನ್ನ ಸಂತರ್ಪಣಾ ಸೇವೆಯಲ್ಲಿ ಭಾಗಿಯಾಗಿ ಸೇವೆ ಸಲ್ಲಿಸಿರುತ್ತಾರೆ.

**13. ಕಾರ್ಯಯೋಜನೆಯ ಬಗ್ಗೆ:** ಬ್ಯಾಂಕಿನ ಎಲ್ಲಾ 17 ಶಾಖೆಗಳು ಹಾಗೂ ಆಡಳಿತ ಕಛೇರಿಯು ಜೆನಿತ್ ಸಾಫ್ಟ್‌ವೇರ್ ಕಂಪೆನಿಯ ಸಹಭಾಗಿತ್ವದಲ್ಲಿ ಸಂಪೂರ್ಣ ಕೋರ್ ಬ್ಯಾಂಕಿಂಗ್ ವ್ಯವಸ್ಥೆಯೊಂದಿಗೆ ಕಾರ್ಯಾಚರಿಸುತ್ತಿದ್ದು, ಗ್ರಾಹಕರಿಗೆ ಹೆಚ್ಚಿನ ಸೇವೆಯನ್ನು ನೀಡುವರೇ NEFT/RTGS, NACH ವ್ಯವಸ್ಥೆಯೊಂದಿಗೆ ಅಂತರ್ ಶಾಖಾ ನಗದು ವರ್ಗಾವಣೆ ಸೌಲಭ್ಯ ಹಾಗೂ ಸೇಫ್ ಲಾಕರ್, ಮೊಬೈಲ್ ಬ್ಯಾಂಕಿಂಗ್, ಎಸ್.ಎಂ.ಎಸ್, ರೂಪೇ ಡೆಬಿಟ್ ಕಾರ್ಡ್, P.O.S, E.Com, U.P.I, IMPS ಹಾಗೂ QR Code Scanner ಸೌಲಭ್ಯವನ್ನು ನೀಡಲಾಗುತ್ತಿದೆ. ಬ್ಯಾಂಕಿನ ಎಲ್ಲಾ ಶಾಖೆಗಳಲ್ಲಿ ಹಾಗೂ ಆಡಳಿತ ಕಛೇರಿಗೆ ಹೆಚ್ಚಿನ ಭದ್ರತೆ ಒದಗಿಸುವ ನಿಟ್ಟಿನಲ್ಲಿ ಎಚ್ಚರಿಕೆ ಕರೆಘಂಟೆ ಹಾಗೂ ಸಿ.ಸಿ. ಕೆಮರಾಗಳನ್ನು ಅಳವಡಿಸಲಾಗಿದೆ.

ಬ್ಯಾಂಕಿನಲ್ಲಿ ಈಗಾಗಲೇ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ದೊರೆಯುವ ಹೆಚ್ಚಿನ ತಂತ್ರಾಂಶ ಸೌಲಭ್ಯ ಅಳವಡಿಸಲಾಗಿದೆ. ಬ್ಯಾಂಕನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿಪಡಿಸಬೇಕೆಂಬುದು ನಮ್ಮೆಲ್ಲರ ಗುರಿಯಾಗಿದ್ದು ಆ ಬಗ್ಗೆ ತಮ್ಮೆಲ್ಲರ ಪೂರ್ಣ ಸಹಕಾರವನ್ನು ಬಯಸುತ್ತೇವೆ.

ಬ್ಯಾಂಕಿನ ಕಾರ್ಯಕ್ಷೇತ್ರ ವ್ಯಾಪ್ತಿಯ ಜಿಲ್ಲೆಗಳಲ್ಲಿ ಬ್ಯಾಂಕಿನ ಹೊಸ ಶಾಖೆ ತೆರೆಯಲು ಮತ್ತು ಹೊಸ ಶಾಖೆಗಳಿಗೆ ಮತ್ತು ಪ್ರಸ್ತುತ ಬಾಡಿಗೆ ನೆಲೆಯಲ್ಲಿರುವ ಶಾಖೆಗಳಿಗೆ ಸ್ವಂತ ಕಟ್ಟಡವನ್ನು ಹೊಂದಬೇಕೆಂಬ ಆಶಯ ಆಡಳಿತ ಮಂಡಳಿಗೆ ಇರುವುದರಿಂದ ಈ ಪ್ರಸ್ತಾವನೆಯನ್ನು ಮಹಾಸಭೆಯ ಮುಂದೆ ಮಂಡಿಸಿರುತ್ತೇವೆ. ಸದಸ್ಯರು ಸಹಕರಿಸಿ ಅನುಮತಿ ನೀಡಬೇಕಾಗಿ ಕೋರುತ್ತೇವೆ.

**ಕೃತಜ್ಞತೆಗಳು:**


ಬ್ಯಾಂಕಿನ ಕಾರ್ಯಕಲಾಪಗಳಿಗೆ ಸದಾ ಮಾರ್ಗದರ್ಶನ ನೀಡುತ್ತಿರುವ ಸಹಕಾರಿ ಇಲಾಖೆಯ ಎಲ್ಲಾ ಅಧಿಕಾರಿ ವರ್ಗದವರಿಗೂ, ಭಾರತೀಯ ರಿಸರ್ವ್ ಬ್ಯಾಂಕಿನ ಅಧಿಕಾರಿಗಳಿಗೂ ಹಾಗೂ ಬ್ಯಾಂಕಿನಲ್ಲಿ ಕೋರ್ ಬ್ಯಾಂಕಿಂಗ್ ಸಾಫ್ಟ್‌ವೇರ್ ಸೌಲಭ್ಯ ಅಳವಡಿಸಿರುವ ಜೆನಿತ್ ಸಾಫ್ಟ್‌ವೇರ್ ಕಂಪೆನಿಯ ಅಧಿಕಾರಿಗಳಿಗೂ ನಿರ್ದೇಶಕ ಮಂಡಲಿಯು ಹೃತ್ಪೂರ್ವಕ ಕೃತಜ್ಞತೆಯನ್ನು ಸಲ್ಲಿಸುತ್ತದೆ.

ಬ್ಯಾಂಕಿನ ಸರ್ವತೋಮುಖ ಶ್ರೇಯೋಭಿವೃದ್ಧಿಗೆ ಸರ್ವರೀತಿಯಿಂದ ಪ್ರೋತ್ಸಾಹಿಸುತ್ತಿರುವ ಸದಸ್ಯರಿಗೆ, ಗ್ರಾಹಕರಿಗೆ ಹಾಗೂ ಠೇವಣಿದಾರರಿಗೆ ಅವರು ಈ ಬ್ಯಾಂಕಿನ ಮೇಲೆ ಇಟ್ಟಿರುವ ಪ್ರೀತಿ, ವಿಶ್ವಾಸ ಮತ್ತು ಅಭಿಮಾನಕ್ಕಾಗಿ ನಿರ್ದೇಶಕ ಮಂಡಳಿಯು ಹೃತ್ಪೂರ್ವಕ ಕೃತಜ್ಞತೆಯನ್ನು ಸಲ್ಲಿಸುತ್ತಿದೆ. ಬ್ಯಾಂಕಿನ ಏಳಿಗೆಗಾಗಿ ಶ್ರಮವಹಿಸಿ ಶ್ರದ್ಧೆಯಿಂದ ಕಾರ್ಯ ನಿರ್ವಹಿಸುತ್ತಿರುವ ಬ್ಯಾಂಕಿನ ಸಿಬ್ಬಂದಿ ವರ್ಗದವರಿಗೆ ಮತ್ತು ಪೂರ್ಣ ಸಹಕಾರವನ್ನು ನೀಡುತ್ತಿರುವ ಕಾನೂನು ಸಲಹೆಗಾರರಿಗೆ, ಮೌಲ್ಯ ಮಾಪಕರಾಗಿರುವ ಇಂಜಿನಿಯರ್‌ಗಳಿಗೆ, ಚಿನ್ನಾಭರಣ ಮೌಲ್ಯಮಾಪಕರಿಗೆ, ಪಿಗ್ಮಿ ಠೇವಣಿ ಸಂಗ್ರಾಹಕರಿಗೆ, ಆಂತರಿಕ ಲೆಕ್ಕ ಪರಿಶೋಧಕರಿಗೆ, ಮಾಹಿತಿ ವ್ಯವಸ್ಥೆಗಳ ಲೆಕ್ಕಪರಿಶೋಧಕರು, ಕನ್ಕರೆಂಟ್ ಲೆಕ್ಕಪರಿಶೋಧಕರು ಹಾಗೂ ಶಾಸನಬದ್ಧ ಲೆಕ್ಕ ಪರಿಶೋಧಕರಿಗೆ ನಮ್ಮ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.


(ನಿರ್ದೇಶಕ ಮಂಡಲಿಯ ಪರವಾಗಿ)

| **ಶ್ರೀ ಚಂದ್ರಶೇಖರ್ ಕುಮಾರ್** | **ಶ್ರೀ ಜಯರಾಮ್ ಪೂಜಾರಿ** | **ಶ್ರೀ ಚಂದ್ರಶೇಖರ್ ಪಿ.** |
| --- | --- | --- |
| ಅಧ್ಯಕ್ಷರು | ಉಪಾಧ್ಯಕ್ಷರು | ಜನರಲ್ ಮೆನೇಜರ್ (ಪ್ರಭಾರ) |

# ಶ್ರೀ ಗೋಕರ್ಣನಾಥ ಕೋ-ಓಪರೇಟಿವ್ ಬ್ಯಾಂಕ್ ಲಿ., ಮಂಗಳೂರು-575003

## ಮಾನ್ಯ ಸದಸ್ಯರಿಗೆ ಸೂಚನೆ

1. ಭಾರತೀಯ ರಿಸರ್ವ್ ಬ್ಯಾಂಕಿನ ಆದೇಶದನ್ವಯ ಬ್ಯಾಂಕಿನಲ್ಲಿ "ನಿಮ್ಮ ಗ್ರಾಹಕರನ್ನು ತಿಳಿಯಿರಿ" ಕ್ರಮವನ್ನು ಅನುಷ್ಠಾನಗೊಳಿಸಿದ್ದು ಅದರನ್ವಯ ಎಲ್ಲಾ ಸದಸ್ಯರು ತಮ್ಮ ಖಾತೆಗಳಿಗೆ ಗುರುತು ದೃಢೀಕರಣಕ್ಕಾಗಿ ಪಾಸ್‌ಪೋರ್ಟ್, ಪಾನ್ ಕಾರ್ಡ್, ವಾಹನ ಚಾಲನೆ ಅನುಮತಿ ಪತ್ರ, ಚುನಾವಣಾ ಆಯೋಗದ ಗುರುತಿನ ಚೀಟಿ, ಆಧಾರ್ ಕಾರ್ಡ್ ಇವುಗಳಲ್ಲಿ ಯಾವುದಾದರೂ ಒಂದು ಹಾಗೂ ಪಾಸ್‌ಪೋರ್ಟ್ ಗಾತ್ರದ ಫೊಟೋಗಳನ್ನು ಸಂಬಂಧಪಟ್ಟ ಶಾಖೆಗಳಲ್ಲಿ ಹಾಜರುಪಡಿಸತಕ್ಕದ್ದು. ಸದ್ರಿ ಆದೇಶವು ಈಗಾಗಲೇ ಇದ್ದ ಹಳೆಯ ಖಾತೆಗಳಿಗೂ ಅನ್ವಯಿಸುತ್ತಿದ್ದು ಬ್ಯಾಂಕಿನ ಎಲ್ಲಾ ಸದಸ್ಯರು ಮೇಲೆ ತಿಳಿಸಿರುವ ದಸ್ತಾವೇಜುಗಳನ್ನು ತಮ್ಮ ಸ್ಥಿರ ದೂರವಾಣಿ/ಮೊಬೈಲ್ ಸಂಖ್ಯೆಗಳೊಂದಿಗೆ ಸಲ್ಲಿಸಿ ಬ್ಯಾಂಕಿನೊಂದಿಗೆ ಸಹಕರಿಸಬೇಕಾಗಿ ವಿನಂತಿಸಲಾಗಿದೆ.

2. ಸಹಕಾರಿ ಸಂಘಗಳ ನಿಯಮ ಮತ್ತು ಬ್ಯಾಂಕಿನ ಉಪವಿಧಿಯನ್ವಯ ಪ್ರತಿಯೊಬ್ಬ ಸದಸ್ಯರಿಗೆ ಬ್ಯಾಂಕು ಗುರುತು ಚೀಟಿ ನೀಡಬೇಕಾಗಿರುತ್ತದೆ. ಗುರುತು ಚೀಟಿ ಪಡೆಯದ ಸದಸ್ಯರು ಪಾಸ್‌ಪೋರ್ಟ್ ಗಾತ್ರದ ತಮ್ಮ 2 ಫೊಟೋ ಪ್ರತಿಗಳನ್ನು ಸಮೀಪದ ಶಾಖೆಯ ಮುಖಾಂತರ ರವಾನಿಸಿಕೊಟ್ಟು ತಮ್ಮ ಗುರುತುಚೀಟಿಗಳನ್ನು ಆದಷ್ಟು ಶೀಘ್ರದಲ್ಲಿ ಪಡೆದುಕೊಳ್ಳುವುದು. ಈಗಾಗಲೇ ಗುರುತು ಚೀಟಿಗೆ ಸಂಬಂಧಿಸಿ ಮಾಹಿತಿ ನೀಡಿ ಈವರೆಗೆ ಗುರುತುಚೀಟಿ ಪಡೆಯದ ಸದಸ್ಯರು ಕೂಡಲೇ ಸಂಬಂಧಪಟ್ಟ ಶಾಖೆಯನ್ನು ಸಂಪರ್ಕಿಸಿ ಗುರುತು ಚೀಟಿ ಪಡೆದುಕೊಳ್ಳುವಂತೆ ವಿನಂತಿಸಲಾಗಿದೆ.

3. ಸದಸ್ಯರು ತಮ್ಮ ವಿಳಾಸ ಬದಲಾವಣೆಯಾದ ಬಗ್ಗೆ ಬ್ಯಾಂಕಿಗೆ ಸಕಾಲದಲ್ಲಿ ತಿಳಿಸುತ್ತಿಲ್ಲ. ಇದರಿಂದಾಗಿ ಅಂತಹ ಸದಸ್ಯರಿಗೆ ಬ್ಯಾಂಕಿನಿಂದ ಕಳುಹಿಸಿಕೊಡುವ ಯಾವುದೇ ಮಾಹಿತಿ ಅವರಿಗೆ ತಲುಪದೇ ಹಿಂತಿರುಗಿ ಬರುತ್ತದೆ. ಇದರಿಂದಾಗಿ ಅಂತಹ ಸದಸ್ಯರಿಗೆ ಮಾಹಿತಿ ಒದಗಿಸುವರೇ ಕಷ್ಟಕರವಾಗಿದೆ ಹಾಗೂ ಬ್ಯಾಂಕಿಗೆ ಅನಾವಶ್ಯಕ ಖರ್ಚು ವೆಚ್ಚವಾಗುತ್ತಿದೆ. ಸನ್ಮಾನ್ಯ ಸದಸ್ಯರು ದಯಮಾಡಿ ತಮ್ಮ ಬದಲಾವಣೆಯಾದ ವಿಳಾಸವನ್ನು ಲಿಖಿತವಾಗಿ ಬ್ಯಾಂಕಿನ ಆಡಳಿತ ಕಛೇರಿಗೆ ತಿಳಿಸಿ ಸಹಕರಿಸುವಂತೆ ಅನೇಕ ಬಾರಿ ಕೋರಲಾಗಿದ್ದರೂ ಕೆಲವು ಸದಸ್ಯರು ಇನ್ನೂ ತಿಳಿಸಿರುವುದಿಲ್ಲ. ಆದುದರಿಂದ ಅಂತಹ ಸದಸ್ಯರಿಗೆ ವಾರ್ಷಿಕ ಸಾಮಾನ್ಯ ಸಭೆಯ ನೋಟೀಸು, ವಾರ್ಷಿಕ ವರದಿ ಇತ್ಯಾದಿ ಮಾಹಿತಿಗಳನ್ನು ಒದಗಿಸಲಾಗುವುದಿಲ್ಲ ಎಂಬುದನ್ನು ಈ ಮೂಲಕ ತಿಳಿಸಲಾಗಿದೆ.

4. ಸದಸ್ಯರಿಗೆ ಸಲ್ಲತಕ್ಕ ಪಾಲುಮುನಾಫೆಯನ್ನು ಬ್ಯಾಂಕು ಸಕಾಲದಲ್ಲಿ ಪಾವತಿಸಲು ಅನುಕೂಲವಾಗುವಂತೆ ಎಲ್ಲಾ ಸದಸ್ಯರು ತಮಗೆ ಅನುಕೂಲಕರವಾಗುವ ತಮ್ಮ ಹತ್ತಿರದ ಬ್ಯಾಂಕಿನ ಶಾಖೆಗಳಲ್ಲಿ ಸಂಚಯ ಖಾತೆಯನ್ನು ತೆರೆಯುವುದು ಮತ್ತು ಈಗಾಗಲೇ ಶಾಖೆಗಳಲ್ಲಿ ಸಂಚಯ ಖಾತೆಯನ್ನು ಹೊಂದಿರುವ ಸದಸ್ಯರು ತಮ್ಮ ಡಿವಿಡೆಂಡನ್ನು ಸದ್ರಿ ಖಾತೆಗೆ ಜಮಾಗೊಳಿಸುವಂತೆ ಲಿಖಿತ ಅರ್ಜಿ ಸಲ್ಲಿಸಿ ತಮ್ಮ ಒಪ್ಪಿಗೆಯನ್ನು ಸೂಚಿಸುವಂತೆ ಈ ಮೂಲಕ ವಿನಂತಿಸಲಾಗಿದೆ.

5. ಭಾರತೀಯ ರಿಸರ್ವ್ ಬ್ಯಾಂಕಿನ ಆದೇಶದನ್ವಯ ಬ್ಯಾಂಕಿನಲ್ಲಿ 10 ವರ್ಷ ಮತ್ತು ಮೇಲ್ಪಟ್ಟು ಅವಧಿಯವರೆಗೆ ವ್ಯವಹಾರ ಮಾಡದೇ ಚಾಲನೆಯಲ್ಲಿಲ್ಲದ ಠೇವಣಾತಿ (In-operative Deposits) ಗಳ ಮೊಬಲಗನ್ನು ಡೆಪಾಸಿಟ್ ಎಜುಕೇಶನ್ ಅವೇರ್‌ನೆಸ್ ಸ್ಕೀಮ್ 2014 (Deposit Education Awareness Scheme 2014) ರನ್ವಯ ಭಾರತೀಯ ರಿಸರ್ವ್ ಬ್ಯಾಂಕಿಗೆ ಪ್ರತಿ ತಿಂಗಳು ವರ್ಗಾಯಿಸಬೇಕಾಗುತ್ತದೆ. ಆದುದರಿಂದ ಎಲ್ಲಾ ಗ್ರಾಹಕರು ತಮ್ಮ ಎಲ್ಲಾ ಖಾತೆಗಳು ಚಾಲ್ತಿಯಲ್ಲಿರುವಂತೆ ನೋಡಿಕೊಳ್ಳಬೇಕಾಗಿ ವಿನಂತಿಸಲಾಗಿದೆ.

6. 2025-26 ನೇ ಸಾಲಿನ ಡಿವಿಡೆಂಡ್ ಪಾವತಿಸುವರೇ ಸದಸ್ಯರು ತಮ್ಮ ಸಂಚಯ ಖಾತೆಯನ್ನು ಬ್ಯಾಂಕಿನಲ್ಲಿ ಡಿವಿಡೆಂಡ್ ಪಾವತಿಗಾಗಿ ನೋಂದಾಯಿಸಿದಲ್ಲಿ ಡಿವಿಡೆಂಡ್ ಘೋಷಣೆಯಾದ ಒಂದು ವಾರದೊಳಗೆ ಸಂಬಂಧಿಸಿದ ಸದಸ್ಯರ ಸಂಚಯ ಖಾತೆಗೆ ಜಮಾ ಮಾಡಲಾಗುವುದು. ಬಾಕಿ ಉಳಿದ ಸದಸ್ಯರು ತಮ್ಮ ಸಂಚಯ ಖಾತೆಯನ್ನು ಶಾಖೆಯಲ್ಲಿ ತೆರೆದು ಡಿವಿಡೆಂಡ್ ಪಾವತಿಗಾಗಿ ನೋಂದಾಯಿಸುವುದು ಅಥವಾ ತಮ್ಮ ಸದಸ್ಯತನಕ್ಕೆ ಸಂಬಂಧಿಸಿದ ಶಾಖೆಯನ್ನು ಸಂಪರ್ಕಿಸಿ ಡಿವಿಡೆಂಡ್ ಘೋಷಣೆಯಾದ ದಿನಾಂಕದಿಂದ 14 ದಿನಗಳ ನಂತರ ನಗದಾಗಿ ಪಡೆಯಬಹುದು.

## ಸಾಲಗಾರರಿಗೆ ಮರಣ ವಿಮಾ ಸೌಲಭ್ಯ

ಬ್ಯಾಂಕಿನಿಂದ ಸಾಲ ಪಡೆದ (ಠೇವಣಾತಿ ಮತ್ತು ಚಿನ್ನಾಭರಣ ಸಾಲ ಹೊರತುಪಡಿಸಿ) ಸದಸ್ಯರಿಗೆ ಅನುಕೂಲವಾಗುವ ಉದ್ದೇಶದಿಂದ ಭಾರತೀಯ ಜೀವ ವಿಮಾ ನಿಗಮ ಇದರ ಸಹಯೋಗದೊಂದಿಗೆ ಸಾಲಗಾರರ ಮರಣ ವಿಮಾ ಯೋಜನೆಯನ್ನು ಅಳವಡಿಸಿಕೊಂಡಿದ್ದು ಈ ಕುರಿತು ಜೀವ ವಿಮಾ ನಿಗಮದೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ. ಈ ವ್ಯವಸ್ಥೆಯಲ್ಲಿ ವಿಮಾ ಪಾಲಿಸಿ ಅವಧಿ 1 ವರ್ಷ ಆಗಿದ್ದು ಗರಿಷ್ಠ ವಿಮಾ ಮೊತ್ತ ರೂ.5 ಲಕ್ಷ ಆಗಿರುತ್ತದೆ.

ಯಾವುದೇ ಕಾರಣದಿಂದ ಸಾಲಗಾರ/ವಿಮಾದಾರ ಮೃತಪಟ್ಟಲ್ಲಿ ಸದರಿ ವಿಷಯವನ್ನು ಮೃತರ ಕುಟುಂಬದವರು ಬ್ಯಾಂಕಿನ ಸಂಬಂಧಿಸಿದ ಶಾಖೆಯ ಗಮನಕ್ಕೆ ತಂದು ಕೆಳಕಾಣಿಸಿದ ಕಾಗದ ಪತ್ರಗಳನ್ನು ಸಲ್ಲಿಸಲು ವಿನಂತಿಸಲಾಗಿದೆ.

1) Death Certificate
2) Claim form duly filled

2025-26ನೇ ಸಾಲಿನಲ್ಲಿ ಸದರಿ ಸೌಲಭ್ಯದಡಿಯಲ್ಲಿ 9 ಸದಸ್ಯರಿಗೆ ಒಟ್ಟು ರೂ.3,15,000/- ಸಾಲಗಾರರಿಗೆ ವಿಮಾ ಪರಿಹಾರ ಒದಗಿಸಲಾಗಿದೆ.

## ಸೆಕ್ಯೂರಿಟೈಜೇಶನ್ ಕಾನೂನು

ಬ್ಯಾಂಕುಗಳಲ್ಲಿ ವರಮಾನ ತರುತ್ತಿಲ್ಲದ ಆಸ್ತಿಗಳನ್ನು (Non Performing Assets) ಕಡಿಮೆಗೊಳಿಸುವ ದಿಶೆಯಲ್ಲಿ ಕೇಂದ್ರ ಸರಕಾರದವರು ಸೆಕ್ಯೂರಿಟೈಜೇಶನ್ ಮತ್ತು ರೀಕನ್‌ಸ್ಟ್ರಕ್ಸನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಅಫ್ ಸೆಕ್ಯೂರಿಟಿ ಇಂಟರೆಸ್ಟ್ ಆ್ಯಕ್ಟ್ 2002 ಕಾಯ್ದೆ 54 ರ ಪ್ರಕಾರ ಸಹಕಾರ ಬ್ಯಾಂಕುಗಳಿಗೆ ಅನ್ವಯಿಸುವಂತೆ ಜಾರಿಗೊಳಿಸಿದ್ದು, ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನದಂತೆ ವರಮಾನ ತರುತ್ತಿಲ್ಲದ ಆಸ್ತಿಯನ್ನು ವಿಂಗಡಿಸಿ, ಭದ್ರತಾ ಸಾಲವನ್ನು ವಸೂಲಿ ಮಾಡಲು ಈ ಕಾಯ್ದೆಯಡಿಯಲ್ಲಿ ಕ್ರಮ ಕೈಗೊಳ್ಳಬಹುದು. ಸರಫೇಸಿ ಕಾಯ್ದೆ (SARFAESI ACT) 54 ಸೆಕ್ಷನ್ (2)ರ ಅಡಿಯಲ್ಲಿ ಬ್ಯಾಂಕಿನ ಸುಸ್ತಿ ಸಾಲಗಾರನಿಗೆ ನೋಟೀಸು ಜಾರಿ ಮಾಡಿ ಸುಸ್ತಿ ಸಾಲಗಾರನು ನೋಟೀಸು ಸ್ವೀಕರಿಸಿದ 60 ದಿವಸಗಳೊಳಗಾಗಿ ಬ್ಯಾಂಕಿನಿಂದ ಪಡೆದಿರುವ ಪೂರ್ತಿ ಸಾಲ ಹಾಗೂ ಬಡ್ಡಿ, ಇನ್ನಿತರ ವೆಚ್ಚಗಳನ್ನು ಪಾವತಿ ಮಾಡಲು ತಿಳಿಸಿ ಅದಕ್ಕೆ ತಪ್ಪಿದಲ್ಲಿ ಸದ್ರಿ ಕಾಯ್ದೆ 13(4) ರ ಪ್ರಕಾರ ಸಾಲಕ್ಕೆ ಭದ್ರತೆಯಾಗಿ ನೀಡಿದ ಸ್ಥಿರಾಸ್ತಿ / ಯಂತ್ರೋಪಕರಣಗಳನ್ನು ಬ್ಯಾಂಕಿನ ವಶಕ್ಕೆ ತೆಗೆದುಕೊಳ್ಳಲು ಅವಕಾಶ ಕಲ್ಪಿಸಲಾಗಿದೆ ಹಾಗೂ ಮಾಲೀಕತ್ವ / ಅಧಿಕಾರ ಹೊಂದಿ 30 ದಿವಸಗಳ ನೋಟೀಸು ನೀಡಿ ಮಾರಾಟ ಮಾಡಿ ಬಂದ ಹಣವನ್ನು ಸಾಲಕ್ಕೆ ಜಮಾ ಮಾಡಿಕೊಳ್ಳಲು ಈ ಕಾಯ್ದೆಯನ್ವಯ ಬ್ಯಾಂಕಿಗೆ ಅಧಿಕಾರವಿರುತ್ತದೆ. ಈ ಕಾಯ್ದೆಯನ್ವಯ ವಸೂಲಾತಿ ಕ್ರಮ ಕಠಿಣತೆ ತಂದೊಡ್ಡುವುದಲ್ಲದೇ ದಿನಪತ್ರಿಕೆಗಳಲ್ಲಿ ಪ್ರಕಟಿಸುವ ಜಾಹೀರಾತು ವೆಚ್ಚ ಇನ್ನಿತರ ವೆಚ್ಚಗಳನ್ನು ಸಾಲಗಾರರೇ ಭರಿಸಬೇಕಾಗಿರುವುದರಿಂದ ಸಾಲಗಾರರು ತಮ್ಮ ಸಾಲದ ಕಂತುಗಳನ್ನು ಸಕಾಲದಲ್ಲಿ ಮರುಪಾವತಿಸಬೇಕಾಗಿ ವಿನಂತಿ.

**ಶ್ರೀ ಚಂದ್ರಶೇಖರ್ ಕುಮಾರ್**
ಅಧ್ಯಕ್ಷರು

# ಶ್ರೀ ಗೋಕರ್ಣನಾಥ ಕೋ–ಓಪರೇಟಿವ್ ಬ್ಯಾಂಕ್ ಲಿ.,

ಪ್ರಧಾನ ಕಛೇರಿ: "ಶ್ರೀ ಗುರುಕೃಪಾ", ಶ್ರೀ ಗೋಕರ್ಣನಾಥ ದೇವಸ್ಥಾನ ರಸ್ತೆ, ಕುದ್ರೋಳಿ, ಮಂಗಳೂರು – 575003, ದ. ಕ.

## 2026-2027ರ ಬಜೆಟ್

| ವಿವರ | 2025–2026 ಬಜೆಟ್ (ರೂ.) | 2025–2026 ಖರ್ಚು (ರೂ.) | ಬಜೆಟಿಗಿಂತ ಜಾಸ್ತಿ ಆದ ಖರ್ಚು (ರೂ.) | 2026–2027 ಬಜೆಟ್ (ರೂ.) |
|---|---|---|---|---|
| **ಆದಾಯ** | | | | |
| ಸಾಲಗಳ ಮೇಲಿನ ಬಡ್ಡಿ | 16,50,00,000.00 | 16,21,27,689.62 | | 25,00,00,000.00 |
| ವಿನಿಯೋಜನೆಗಳ ಮೇಲಿನ ಬಡ್ಡಿ | 5,50,00,000.00 | 5,24,14,899.00 | | 5,50,00,000.00 |
| ಇತರ ಆದಾಯ | 1,85,00,000.00 | 1,94,84,283.26 | 9,84,283.26 | 3,00,00,000.00 |
| **ಜುಮ್ಲಾ** | **23,85,00,000.00** | **23,40,26,871.88** | | **33,50,00,000.00** |
| **ಖರ್ಚು** | | | | |
| ಠೇವಣಿ ಮತ್ತು ಸಾಲಗಳ ಮೇಲಿನ ಬಡ್ಡಿ | 12,50,00,000.00 | 12,47,06,265.00 | | 18,00,00,000.00 |
| ಸಿಬ್ಬಂದಿಗಳ ಸಂಬಳ, ವೈದ್ಯಕೀಯ ಭತ್ಯೆ, ಗ್ರಾಚ್ಯುಯಿಟಿ | 4,41,50,000.00 | 4,36,91,606.00 | | 6,21,50,000.00 |
| ಸಿಬ್ಬಂದಿ ಭವಿಷ್ಯನಿಧಿ ವಂತಿಗೆ | 18,00,000.00 | 14,29,163.00 | | 20,00,000.00 |
| ಬೋನಸ್/ಎಕ್ಸ್‌ಗ್ರೇಷಿಯಾ | – | 4,99,375.00 | 4,99,375.00 | – |
| ಆಡಳಿತ ಸಭೆಯ ಖರ್ಚು | 3,50,000.00 | 1,94,318.36 | | 3,50,000.00 |
| ನಿರ್ದೇಶಕರ ಆಸಿನ ಶಿಲ್ಕು | 6,00,000.00 | 4,26,250.00 | | 6,00,000.00 |
| ನಿರ್ದೇಶಕರಿಗೆ ಪ್ರಯಾಣ ಭತ್ಯೆ | 50,000.00 | 3,642.00 | | 50,000.00 |
| ಆಫೀಸು ಬಾಡಿಗೆ | 65,00,000.00 | 62,52,978.00 | | 70,00,000.00 |
| ವೃತ್ತಿ ತೆರಿಗೆ | 50,000.00 | 45,000.00 | | 50,000.00 |
| ಕಟ್ಟಡ ತೆರಿಗೆ | 1,00,000.00 | 98,517.00 | | 1,50,000.00 |
| ಜಿ.ಎಸ್.ಟಿ/ಸೇವಾ ಶುಲ್ಕ | 6,00,000.00 | 3,60,013.10 | | 6,00,000.00 |
| ವಿಮಾ ಕಂತು | 30,00,000.00 | 28,64,851.65 | | 35,00,000.00 |
| ವಿದ್ಯುಚ್ಛಕ್ತಿ | 12,00,000.00 | 8,21,184.50 | | 12,00,000.00 |
| ಪ್ರಚಾರ | – | – | | 2,00,000.00 |
| ಕಾನೂನು ವೆಚ್ಚ | 2,00,000.00 | – | | 2,00,000.00 |
| ಅಂಚೆ | 3,00,000.00 | 2,57,644.62 | | 3,50,000.00 |
| ದೂರವಾಣಿ | 3,00,000.00 | 2,51,506.40 | | 3,00,000.00 |
| ಸವಕಳಿ | 18,00,000.00 | 15,32,462.81 | | 20,00,000.00 |
| ಮುದ್ರಣ ಮತ್ತು ಸ್ಟೇಶನರಿ | 7,00,000.00 | 6,37,297.75 | | 9,00,000.00 |
| ಜಾಹೀರಾತು | 2,00,000.00 | 1,29,763.88 | | 2,00,000.00 |
| ಪ್ರಯಾಣ ಸಂಬಂಧ ಇತರ ಖರ್ಚು | 1,60,000.00 | 1,81,574.00 | 21,574.00 | 3,50,000.00 |
| ಅತಿಥಿ ಸತ್ಕಾರ ಖರ್ಚು | 1,00,000.00 | 1,66,288.00 | 66,288.00 | 3,50,000.00 |
| ದುರಸ್ತಿ ಮತ್ತು ನಿರ್ವಹಣೆ | 25,00,000.00 | 16,45,714.50 | | 29,00,000.00 |

| ವಿವರ | 2025–2026<br>ಬಜೆಟ್ (ರೂ.) | 2025–2026<br>ಖರ್ಚು (ರೂ.) | ಬಜೆಟಗಿಂತ ಜಾಸ್ತಿ<br>ಆದ ಖರ್ಚು (ರೂ.) | 2026–2027<br>ಬಜೆಟ್ (ರೂ.) |
|---|---|---|---|---|
| ಕಛೇರಿ ಚಿಲ್ಲರೆ ಖರ್ಚು | 14,00,000.00 | 12,27,403.00 | | 14,00,000.00 |
| ಬ್ಯಾಂಕು ಶುಲ್ಕ | 3,00,000.00 | 3,65,543.00 | 65,543.00 | 4,50,000.00 |
| ಸಿಬ್ಬಂದಿ ತರಬೇತಿ ವೆಚ್ಚ | 2,00,000.00 | 1,15,911.00 | | 2,00,000.00 |
| ಭವಿಷ್ಯನಿಧಿ ಆಡಳಿತಾತ್ಮಕ ವೆಚ್ಚ | 1,00,000.00 | 59,863.00 | | 1,50,000.00 |
| ಇ.ಡಿ.ಎಲ್.ಐ. ಶುಲ್ಕ | 5,00,000.00 | 3,82,522.73 | | 5,00,000.00 |
| ಸಿಬ್ಬಂದಿ ಪ್ರಯಾಣ ವೆಚ್ಚ | 2,00,000.00 | 1,43,006.00 | | 2,50,000.00 |
| ಮಹಾಮಂಡಳ ಸದಸ್ಯತ್ವ ಶುಲ್ಕ | 50,000.00 | 50,000.00 | | 50,000.00 |
| ಅನುಪಯುಕ್ತ ಪೀಠೋಪಕರಣ ಮಾರಾಟದಿಂದ ನಷ್ಟ | – | 5,152.59 | 5,152.59 | – |
| ಶಾಖಾಧಿಕಾರಿಗಳ ಸಭೆಯ ಖರ್ಚು | 35,000.00 | 5,385.00 | | 35,000.00 |
| ಜಿ.ಎಸ್.ಟಿ. (R.C.M.) | 4,00,000.00 | 3,42,846.00 | | 4,00,000.00 |
| ಮಹಾಸಭೆಯ ವೆಚ್ಚ | 5,00,000.00 | 3,98,352.72 | | 6,00,000.00 |
| ಪಿಗ್ಮಿ ಏಜೆಂಟರ ಕಮೀಷನ್ | 75,00,000.00 | 80,09,853.00 | 5,09,853.00 | 90,00,000.00 |
| ಕೋರ್ ಬ್ಯಾಂಕಿಂಗ್ ಸೊಲ್ಯೂಶನ್ | 40,00,000.00 | 38,06,280.00 | | 75,00,000.00 |
| ಸರಕಾರಿ ಹೂಡಿಕೆ ಮೇಲಿನ ಪ್ರೀಮಿಯಮ್ | 1,50,000.00 | 1,21,872.00 | | 1,50,000.00 |
| ವೃತ್ತಿಪರ ಸಲಹಾ ಶುಲ್ಕ | 2,50,000.00 | 3,50,241.00 | 1,00,241.00 | 5,00,000.00 |
| ಇಲಾಖಾ ಲೆಕ್ಕ ಪರಿಶೋಧನಾ ಶುಲ್ಕ | 6,00,000.00 | 5,44,696.00 | | 7,00,000.00 |
| ಆಂತರಿಕ ಲೆಕ್ಕ ಪರಿಶೋಧನಾ ಶುಲ್ಕ | 3,00,000.00 | 2,96,667.00 | | 4,00,000.00 |
| ಇ.ಡಿ.ಪಿ. ಆಡಿಟ್ | 75,000.00 | 1,35,580.00 | 60,580.00 | 2,50,000.00 |
| ಎ.ಟಿ.ಎಂ. ಖರ್ಚು | 10,00,000.00 | 10,93,065.00 | 93,065.00 | 17,00,000.00 |
| ಮೊಬೈಲ್ ಬ್ಯಾಂಕಿಂಗ್ ವೆಚ್ಚ | 15,00,000.00 | 6,68,174.00 | | 20,00,000.00 |
| ಶಾಖಾ ಸ್ಥಳಾಂತರ ವೆಚ್ಚ | 10,00,000.00 | 3,33,186.40 | | 10,00,000.00 |
| ಶಾಖಾ ಪ್ರಾರಂಭಿಕ ವೆಚ್ಚ | – | – | | 10,00,000.00 |
| ಸಿ.ಟಿ.ಎಸ್. ಕ್ಲಿಯರಿಂಗ್ ಇಪ್ಲಿಮೇಂಟೇಶನ್ ಚಾರ್ಜು | 1,00,000.00 | 32,155.00 | | 1,00,000.00 |
| ಕ್ರೆಡಿಟ್ ಇನ್ಫೋಫಾರ್ಮೇಶನ್ ಛಾರ್ಜು | 1,80,000.00 | 1,22,830.33 | | 2,25,000.00 |
| ಕ್ಯು.ಆರ್ ಕೋಡ್ ಸ್ಕ್ಯಾನರ್ ವೆಚ್ಚ | – | 13,856.00 | 13,856.00 | – |
| ಸಿಬ್ಬಂದಿ ನೇಮಕಾತಿ ವೆಚ್ಚ | – | – | | 10,00,000.00 |
| ಆದಾಯ ತೆರಿಗೆ ಪಾವತಿ (ಟಿ.ಡಿ.ಎಸ್) | – | 35,668.00 | 35,668.00 | |
| ಮಿಗತೆ : ನಿರ್ವಹಣಾ ಲಾಭ | 2,85,00,000.00 | 2,91,71,347.54 | | 4,00,40,000.00 |
| **ಒಟ್ಟು** | **23,85,00,000.00** | **23,40,26,871.88** | | **33,50,00,000.00** |

(ನಿರ್ದೇಶಕ ಮಂಡಲಿಯ ಅನುಮತಿ ಮೇರೆಗೆ)

| ಸಹಿ/– | ಸಹಿ/– | ಸಹಿ/– | ಸಹಿ/– |
|---|---|---|---|
| **ಶ್ರೀ ಹರೀಶ್ ಕೊಡವೂರು** | **ಶ್ರೀ ಚಂದ್ರಶೇಖರ್ ಪಿ.** | **ಶ್ರೀ ಜಯರಾಮ್ ಪೂಜಾರಿ** | **ಶ್ರೀ ಚಂದ್ರಶೇಖರ್ ಕುಮಾರ್** |
| ಅಕೌಂಟೆಂಟ್ | ಜನರಲ್ ಮೆನೇಜರ್(ಪ್ರಭಾರ) | ಉಪಾಧ್ಯಕ್ಷರು | ಅಧ್ಯಕ್ಷರು |

# ಶ್ರೀ ಗೋಕರ್ಣನಾಥ ಕೋ-ಓಪರೇಟಿವ್ ಬ್ಯಾಂಕ್ ಲಿ.

ಪ್ರಧಾನ ಕಛೇರಿ: ಶ್ರೀ ಗುರುಕೃಪಾ, ಶ್ರೀ ಗೋಕರ್ಣನಾಥ ದೇವಸ್ಥಾನ ರಸ್ತೆ, ಕುದ್ರೋಳಿ, ಮಂಗಳೂರು – 575003, ದ.ಕ.

## ದಿನಾಂಕ 01-04-2025 ರಿಂದ 31-03-2026 ರವರೆಗಿನ ಲಾಭ-ನಷ್ಟ ತಃಖ್ತೆ

| 2024–25 | ಖರ್ಚು / ವೆಚ್ಚಗಳು | ಅನುಬಂಧ | 2025–26 ರೂ. ಪೈ. | 2024–25 | ಆದಾಯಗಳು | ಅನುಬಂಧ | 2025–26 ರೂ. ಪೈ. |
|---|---|---|---|---|---|---|---|
| 116144476.50 | 1. ಠೇವಣಿ ವೆಚ್ಚ | 12 | 132716118.00 | 188954111.97 | 1. ಬಡ್ಡಿ ಆದಾಯ | 10 | 214542588.62 |
| 44149609.48 | 2. ಸಿಬ್ಬಂದಿ ವೆಚ್ಚ | 13 | 45620144.00 | 17765373.82 | 2.ಇತರ ಆದಾಯ | 11 | 19484283.26 |
| 23005083.61 | 3. ಆಡಳಿತಾತ್ಮಕ ವೆಚ್ಚಗಳು: | 14 | 24145436.53 | | | | |
| 750796.00 | 4. ಲೆಕ್ಕ ಪರಿಶೋಧನಾ ಶುಲ್ಕ | 15 | 841363.00 | | | | |
| 1514487.14 | 5. ಸವಕಳಿ ಖರ್ಚು | 16 | 1532462.81 | | | | |
| 21155033.06 | 6. ಪ್ರಸಕ್ತ ಸಾಲಿನ ಲಾಭ (ತೆರಿಗೆಗೆ ಮುನ್ನ) | | 29171347.54 | | | | |
| **206719485.79** | **ಮೊತ್ತ** | | **234026871.88** | **206719485.79** | | | **234026871.88** |
| | **ಕಾದಿರಿಸಿದ್ದು :** | | | **21155033.06** | **ಪ್ರಸಕ್ತ ಸಾಲಿನ ಲಾಭ (ತೆರಿಗೆಗೆ ಮುನ್ನ)** | | **29171347.54** |
| 5007839.00 | ಮಾನಕ ದರ್ಜೆ ಆಸ್ತಿಗೆ ಮೀಸಲು | 1308785.00 | | | | | |
| 28792241.77 | ಕೆಟ್ಟ ಮತ್ತು ಅನುಮಾನಾಸ್ಪದ ಸಾಲದ ನಿಧಿ | | | 33800080.77 | ಕೆಟ್ಟ ಸಾಲದ ನಿಧಿ | | |
